ಸೂ. 85 **40. ಅಲ್‌ಮೂಮಿನ್** ರು. 9

اٰيَاتُهَا ٨٥ سُوْرَةُ الْمُؤْمِنِ مَكِّيَّةٌ رُكُوْعَاتُهَا ٩

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಹಾ ಮೀಮ್.

حٰمٓ ۚ ﴿١﴾

2. ಈ ಗ್ರಂಥದ ಅವತೀರ್ಣವು ಅಲ್ಲಾಹನ ಕಡೆಯಿಂದಾಗಿರುತ್ತದೆ. ಅವನು ಪ್ರಬಲನೂ ಸರ್ವಜ್ಞನೂ-

تَنْزِيْلُ الْكِتٰبِ مِنَ اللّٰهِ الْعَزِيْزِ الْعَلِيْمِ ۙ ﴿٢﴾

3. ಪಾಪಗಳನ್ನು ಕ್ಷಮಿಸುವವನೂ ಪಶ್ಚಾತ್ತಾಪ ಸ್ವೀಕರಿಸುವವನೂ ಕಠಿಣ ಶಿಕ್ಷೆ ಕೊಡುವವನೂ ಮಹಾ ಅನುಗ್ರಹಿಯೂ ಆಗಿರುತ್ತಾನೆ. ಅವನ ಹೊರತು ಬೇರೆ ಆರಾಧ್ಯರಿಲ್ಲ, ಸರ್ವರಿಗೂ ಅವನ ಕಡೆಗೇ ಮರಳಬೇಕಾಗಿದೆ.

غَافِرِ الذَّنْۢبِ وَقَابِلِ التَّوْبِ شَدِيْدِ
الْعِقَابِ ۙ ذِى الطَّوْلِ ؕ لَاۤ اِلٰهَ اِلَّا هُوَ ؕ
اِلَيْهِ الْمَصِيْرُ ﴿٣﴾

4. ಸತ್ಯವನ್ನು ನಿಷೇಧಿಸಿದವರ ಹೊರತು ಇನ್ನಾರೂ ಅಲ್ಲಾಹನ ವಚನಗಳ ಬಗ್ಗೆ ಜಗಳಾಡುವುದಿಲ್ಲ. ಆದುದರಿಂದ ಜಗತ್ತಿನ ನಾಡುಗಳಲ್ಲಿ ಅವರ ಚಲನವಲನಗಳು ನಿಮ್ಮನ್ನು ವಂಚಿಸದಿರಲಿ.

مَا يُجَادِلُ فِيْۤ اٰيٰتِ اللّٰهِ اِلَّا الَّذِيْنَ
كَفَرُوْا فَلَا يَغْرُرْكَ تَقَلُّبُهُمْ فِى الْبِلَادِ ﴿٤﴾

5. ಇವರಿಗಿಂತ ಮುಂಚೆ ನೂಹರ ಜನಾಂಗವೂ ಸುಳ್ಳಾಗಿಸಿದೆ. ಆ ಬಳಿಕ ಇತರ ಅನೇಕ ಕೂಟಗಳೂ ಹೀಗೆ ಮಾಡಿವೆ. ಪ್ರತಿಯೊಂದು ಜನಾಂಗವೂ ತನ್ನ ಸಂದೇಶವಾಹಕನನ್ನು ಸೆರೆ ಹಿಡಿಯಲಿಕ್ಕಾಗಿ ಅವನ ಮೇಲೆ ಎರಗಿತು. ಅವರೆಲ್ಲರೂ ಮಿಥ್ಯದ ಅಸ್ತ್ರಗಳಿಂದ ಸತ್ಯವನ್ನು ಕೀಳಾಗಿಸಲು ಯತ್ನಿಸಿದರು. ಆದರೆ ಕೊನೆಗೆ ನಾನು ಅವರನ್ನು ಹಿಡಿದು ಬಿಟ್ಟೆನು. ನನ್ನ ಶಿಕ್ಷೆಯು ಎಷ್ಟು ಕಠಿಣ ವಾಗಿತ್ತೆಂದು ನೋಡಿರಿ.

كَذَّبَتْ قَبْلَهُمْ قَوْمُ نُوْحٍ وَّالْاَحْزَابُ
مِنْۢ بَعْدِهِمْ ۖ وَهَمَّتْ كُلُّ اُمَّةٍۭ
بِرَسُوْلِهِمْ لِيَاْخُذُوْهُ وَجٰدَلُوْا بِالْبَاطِلِ
لِيُدْحِضُوْا بِهِ الْحَقَّ فَاَخَذْتُهُمْ ۗ
فَكَيْفَ كَانَ عِقَابِ ﴿٥﴾

6. ಇದೇ ರೀತಿಯಲ್ಲಿ ಅವರು ಖಂಡಿತವಾಗಿಯೂ ನರಕ ವಾಸಿಗಳಾಗಲಿರುವರೆಂಬ ನಿಮ್ಮ ಪ್ರಭುವಿನ ತೀರ್ಮಾನವು ಸತ್ಯ ನಿಷೇಧಿಗಳಾಗಿರುವ ಎಲ್ಲರಿಗೆ ಅನ್ವಯವಾಗಿ ಬಿಟ್ಟಿದೆ.

وَكَذٰلِكَ حَقَّتْ كَلِمَتُ رَبِّكَ عَلَى الَّذِيْنَ
كَفَرُوْۤا اَنَّهُمْ اَصْحٰبُ النَّارِ ۘ ﴿٦﴾

وقف لازم

7. 'ವಿಶ್ವಸಿಂಹಾಸನ'ವನ್ನು ಹೊತ್ತ ದೇವಚರರು ಮತ್ತು ಅದರ ಸುತ್ತಲೂ ಉಪಸ್ಥಿತರಿರುವವರು ತಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನನ್ನು ಸ್ತುತಿಸುತ್ತಿರುತ್ತಾರೆ. ಅವರು ಅವನ ಮೇಲೆ ವಿಶ್ವಾಸವಿರಿಸುತ್ತಾರೆ ಮತ್ತು ಸತ್ಯವಿಶ್ವಾಸಿಗಳ ಪಾಪ ವಿಮೋಚನೆಗಾಗಿ ಪ್ರಾರ್ಥಿಸುತ್ತಾರೆ. ಅವರು ಹೇಳುತ್ತಾರೆ; ನಮ್ಮ ಪ್ರಭೂ, ನೀನು ನಿನ್ನ ಕೃಪೆ ಮತ್ತು ನಿನ್ನ ಜ್ಞಾನದೊಂದಿಗೆ ಸಕಲ ವಸ್ತುಗಳನ್ನು ಆವರಿಸಿಕೊಂಡಿರುವೆ. ಆದುದರಿಂದ ಪಶ್ಚಾತ್ತಾಪ ಪಟ್ಟವರನ್ನು ಹಾಗೂ ನಿನ್ನ ಮಾರ್ಗವನ್ನು ಸ್ವೀಕರಿಸಿಕೊಂಡವರನ್ನು ಕ್ಷಮಿಸು ಮತ್ತು ನರಕ ಯಾತನೆಯಿಂದ ರಕ್ಷಿಸು.

ٱلَّذِينَ يَحْمِلُونَ ٱلْعَرْشَ وَمَنْ حَوْلَهُۥ
يُسَبِّحُونَ بِحَمْدِ رَبِّهِمْ وَيُؤْمِنُونَ
بِهِۦ وَيَسْتَغْفِرُونَ لِلَّذِينَ ءَامَنُوا۟ رَبَّنَا
وَسِعْتَ كُلَّ شَىْءٍ رَّحْمَةً وَعِلْمًا فَٱغْفِرْ
لِلَّذِينَ تَابُوا۟ وَٱتَّبَعُوا۟ سَبِيلَكَ وَقِهِمْ
عَذَابَ ٱلْجَحِيمِ ⑦

8. ನಮ್ಮ ಪ್ರಭೂ, ನೀನು ಅವರಿಗೆ ವಾಗ್ದಾನ ಮಾಡಿರುವ ಶಾಶ್ವತವಾದ ಸ್ವರ್ಗೋದ್ಯಾನಗಳಲ್ಲಿ ಅವರನ್ನು ಪ್ರವೇಶಗೊಳಿಸು. ಅವರ ಪಿತರ, ಪತ್ನಿಯರ ಮತ್ತು ಮಕ್ಕಳ ಪೈಕಿ ಸಜ್ಜನರಾದವರನ್ನು ಕೂಡಾ ಅವರೊಂದಿಗೆ ಅಲ್ಲಿಗೆ ತಲುಪಿಸು. ನಿಶ್ಚಯವಾಗಿಯೂ ನೀನು ಪ್ರಬಲನೂ ಯುಕ್ತಿವಂತನೂ ಆಗಿರುವೆ.

رَبَّنَا وَأَدْخِلْهُمْ جَنَّـٰتِ عَدْنٍ ٱلَّتِى
وَعَدتَّهُمْ وَمَن صَلَحَ مِنْ ءَابَآئِهِمْ
وَأَزْوَٰجِهِمْ وَذُرِّيَّـٰتِهِمْ ۚ إِنَّكَ أَنتَ
ٱلْعَزِيزُ ٱلْحَكِيمُ ⑧

9. ಅವರನ್ನು ಕೇಡುಗಳಿಂದ ರಕ್ಷಿಸು. ನೀನು ಆ ದಿನ ಯಾರನ್ನು ಕೇಡುಗಳಿಂದ ರಕ್ಷಿಸಿದೆಯೋ ಅವನ ಮೇಲೆ ನೀನು ಮಹಾ ಕೃಪೆಗೈದೆ. ಇದುವೇ ಮಹಾ ಯಶಸ್ಸಾಗಿದೆ.

وَقِهِمُ ٱلسَّيِّـَٔاتِ ۚ وَمَن تَقِ ٱلسَّيِّـَٔاتِ
يَوْمَئِذٍ فَقَدْ رَحِمْتَهُۥ ۚ وَذَٰلِكَ هُوَ
ٱلْفَوْزُ ٱلْعَظِيمُ ⑨

10. ಸತ್ಯನಿಷೇಧಿಗಳೊಡನೆ ಪುನರುತ್ಥಾನ ದಿನ ಹೀಗೆ ಕೂಗಿ ಹೇಳಲಾಗುವುದು- "ಇಂದು ನಿಮಗೆ ನಿಮ್ಮ ಮೇಲೆ ಎಷ್ಟು ತೀವ್ರವಾದ ಕೋಪ ಬರುತ್ತಿದೆಯೋ ಅದಕ್ಕಿಂತಲೂ ತೀವ್ರವಾದ ಕೋಪವು ನಿಮ್ಮನ್ನು ಸತ್ಯವಿಶ್ವಾಸದ ಕಡೆಗೆ ಕರೆಯಲಾಗುತ್ತಿದ್ದ ವೇಳೆ ನೀವು ನಿರಾಕರಿಸುತ್ತಿದ್ದಾಗ, ಅಲ್ಲಾಹನಿಗೆ ನಿಮ್ಮ ಮೇಲೆ ಬರುತ್ತಿತ್ತು."

إِنَّ ٱلَّذِينَ كَفَرُوا۟ يُنَادَوْنَ لَمَقْتُ ٱللَّهِ
أَكْبَرُ مِن مَّقْتِكُمْ أَنفُسَكُمْ إِذْ
تُدْعَوْنَ إِلَى ٱلْإِيمَـٰنِ فَتَكْفُرُونَ ⑩

11. ಆಗ ಅವರು ಹೇಳುವರು; "ನಮ್ಮ ಪ್ರಭೂ, ನಿಜಕ್ಕೂ ನೀನು ನಮಗೆ ಎರಡು ಸಲ ಮರಣವನ್ನೂ ಎರಡು ಸಲ ಜೀವನವನ್ನೂ ನೀಡಿರುವೆ.[1] ಈಗ ನಾವು ನಮ್ಮ ಅಪರಾಧಗಳನ್ನು ಒಪ್ಪಿಕೊಳ್ಳುತ್ತೇವೆ. ಈಗ ಇಲ್ಲಿಂದ ಹೊರ ಹೋಗುವ ದಾರಿ ಯಾವುದಾದರೂ ಇದೆಯೇ?" ಎನ್ನುವರು.

قَالُوا۟ رَبَّنَآ أَمَتَّنَا ٱثْنَتَيْنِ وَأَحْيَيْتَنَا
ٱثْنَتَيْنِ فَٱعْتَرَفْنَا بِذُنُوبِنَا فَهَلْ
إِلَىٰ خُرُوجٍ مِّن سَبِيلٍ ⑪

12. (ಆಗ ಅವರಿಗೆ ಹೀಗೆ ಉತ್ತರ ಸಿಗುವುದು;) "ನೀವು ಈ ಅವಸ್ಥೆಗೆ

ذَٰلِكُم بِأَنَّهُۥٓ إِذَا دُعِىَ ٱللَّهُ وَحْدَهُۥ

1. ಎರಡು ಬಾರಿ ಮರಣ ಮತ್ತು ಎರಡು ಬಾರಿ ಜೀವನ ನೀಡುವುದೆಂದರೆ ಅಲ್ ಬಕರಃ ಅಧ್ಯಾಯದ ಸೂಕ್ತ 28ರಲ್ಲಿ ವಿವರಿಸಿರುವುದೇ ಆಗಿದೆ.

ತುತ್ತಾಗಲು ಕಾರಣವೇನೆಂದರೆ- ನಿಮ್ಮನ್ನು ಏಕಮಾತ್ರ ಅಲ್ಲಾಹನ ಕಡೆಗೆ ಕರೆಯುತ್ತಿದ್ದಾಗ ನೀವು ನಿರಾಕರಿಸಿದ್ದೀರಿ ಮತ್ತು ಅವನ ಜೊತೆ ಇತರರನ್ನು ಸಹಭಾಗಿಗಳಾಗಿ ಮಾಡಿದಾಗ ನೀವು ಒಪ್ಪಿ ಕೊಳ್ಳುತ್ತಿದ್ದಿರಿ. ಈಗ ತೀರ್ಮಾನವು ಅತ್ಯುನ್ನತನೂ ಮಹಾನನೂ ಆದ ಅಲ್ಲಾಹನ ಕೈಯಲ್ಲಿದೆ."

كَفَرْتُمْ ۖ وَإِن يُشْرَكْ بِهِ تُؤْمِنُوا ۚ
فَالْحُكْمُ لِلَّهِ الْعَلِيِّ الْكَبِيرِ ⑫

13. ಅವನೇ ನಿಮಗೆ ತನ್ನ ನಿದರ್ಶನಗಳನ್ನು ತೋರಿಸುತ್ತಾನೆ ಮತ್ತು ಆಕಾಶದಿಂದ ನಿಮಗಾಗಿ ಆಹಾರವನ್ನು ಇಳಿಸುತ್ತಾನೆ.[2] ಆದರೆ ಅಲ್ಲಾಹನ ಕಡೆಗೆ ಮರಳುವವನು ಮಾತ್ರ (ಈ ನಿದರ್ಶನಗಳನ್ನು ಕಂಡು) ಪಾಠ ಕಲಿಯುತ್ತಾನೆ.

هُوَ الَّذِي يُرِيكُمْ آيَاتِهِ وَيُنَزِّلُ
لَكُم مِّنَ السَّمَاءِ رِزْقًا ۚ وَمَا يَتَذَكَّرُ
إِلَّا مَن يُنِيبُ ⑬

14. (ಆದುದರಿಂದ ಮರಳುವವರೇ) ನಿಮ್ಮ ಧರ್ಮವನ್ನು ಅಲ್ಲಾಹನಿಗಾಗಿಯೇ ಮುಡಿಪಾಗಿರಿಸಿರಿ, ಅವನನ್ನೇ ಪ್ರಾರ್ಥಿಸಿರಿ. ಇದು ಸತ್ಯನಿಷೇಧಿಗಳಿಗೆ ಎಷ್ಟು ಅಪ್ರಿಯವಾಗಿದ್ದರೂ ಸರಿಯೇ.

فَادْعُوا اللَّهَ مُخْلِصِينَ لَهُ الدِّينَ
وَلَوْ كَرِهَ الْكَافِرُونَ ⑭

15. ಅವನು ಅತ್ಯುನ್ನತ ಪದವಿಯುಳ್ಳವನೂ ವಿಶ್ವ ಸಿಂಹಾಸನದ ಒಡೆಯನೂ ಆಗಿರುತ್ತಾನೆ. ಭೇಟಿಯಾಗುವ ದಿನದ ಬಗ್ಗೆ ಎಚ್ಚರಿಕೆ ಕೊಡಲಿಕ್ಕಾಗಿ ಅವನು ತನ್ನ ದಾಸರ ಪೈಕಿ ತಾನಿಚ್ಛಿಸಿದವರ ಮೇಲೆ ತನ್ನ ಅಪ್ಪಣೆಯಿಂದ 'ದಿವ್ಯವಾಣಿ'ಯನ್ನು ಅವತೀರ್ಣಗೊಳಿಸುತ್ತಾನೆ.

رَفِيعُ الدَّرَجَاتِ ذُو الْعَرْشِ يُلْقِي
الرُّوحَ مِنْ أَمْرِهِ عَلَىٰ مَن يَشَاءُ
مِنْ عِبَادِهِ لِيُنذِرَ يَوْمَ التَّلَاقِ ⑮

16. ಎಲ್ಲ ಜನರೂ ಬಹಿರಂಗಗೊಳ್ಳುವ ಆ ದಿನ ಅವರ ಯಾವ ವಿಷಯವೂ ಅಲ್ಲಾಹನಿಂದ ಅಡಗಿರಲಾರದು. ಇಂದು ಪ್ರಭುತ್ವ ಯಾರದು? (ಎಂದು ಆ ದಿನ ಕೂಗಿ ಕೇಳಲಾಗುವುದು) ಏಕೈಕನೂ ಅಜೇಯನೂ ಆದ ಅಲ್ಲಾಹನದು. (ಎಂದು ಇಡೀ ವಿಶ್ವವು ಕೂಗಿ ಹೇಳುವುದು)

يَوْمَ هُم بَارِزُونَ ۖ لَا يَخْفَىٰ عَلَى
اللَّهِ مِنْهُمْ شَيْءٌ ۚ لِّمَنِ الْمُلْكُ الْيَوْمَ ۖ
لِلَّهِ الْوَاحِدِ الْقَهَّارِ ⑯

17. (ಆಗ) ಇಂದು ಪ್ರತಿಯೊಬ್ಬ ಜೀವಿಗೆ ಅವನು ಸಂಪಾದಿಸಿದುದರ ಪ್ರತಿಫಲ ನೀಡಲಾಗುವುದು. ಇಂದು ಯಾರ ಮೇಲೂ ಅನ್ಯಾಯ ಆಗದು. (ಎಂದು ಹೇಳಲಾಗುವುದು) ನಿಶ್ಚಯವಾಗಿಯೂ ಅಲ್ಲಾಹನು ಲೆಕ್ಕ ಪರಿಶೋಧನೆಯಲ್ಲಿ ಅತಿ ಶೀಘ್ರನಾಗಿರುತ್ತಾನೆ.

الْيَوْمَ تُجْزَىٰ كُلُّ نَفْسٍ بِمَا كَسَبَتْ ۚ
لَا ظُلْمَ الْيَوْمَ ۚ إِنَّ اللَّهَ سَرِيعُ الْحِسَابِ ⑰

18. ಸಂದೇಶವಾಹಕರೇ, ಸನ್ನಿಹಿತವಾಗಿರುವ ಆ ದಿನದ ಬಗ್ಗೆ ಈ

وَأَنذِرْهُمْ يَوْمَ الْآزِفَةِ إِذِ الْقُلُوبُ

2. ಅರ್ಥಾತ್- ಜೀವನಾಧಾರಗಳಿಗೆ ಮೂಲವಾದ ಮಳೆ ಸುರಿಸುತ್ತಾನೆ. ಜೀವನಾಧಾರಗಳ ಉತ್ಪಾದನೆಗೆ ಕಾರಣವಾದ ಬೇಸಿಗೆ ಮತ್ತು ಚಳಿಯನ್ನು ಇಳಿಸುತ್ತಾನೆ.

ಜನರಿಗೆ ಎಚ್ಚರಿಕೆ ನೀಡಿರಿ. ಆಗ ಹೃದಯಗಳು ಗಂಟಲಿಗೇರಿ ಜನರು ಶೋಕತಪ್ತರಾಗಿ ನಿಂತಿರುವರು. ಅಕ್ರಮಿಗಳಿಗೆ ಆಪ್ತ ಮಿತ್ರನಾಗಲಿ ಪ್ರಭಾವಶಾಲೀ ಶಿಫಾರಸುದಾರನಾಗಲಿ ಇರಲಾರನು.

لَدَى الْحَنَاجِرِ كٰظِمِيْنَ ۚ مَا
لِلظّٰلِمِيْنَ مِنْ حَمِيْمٍ وَّلَا شَفِيْعٍ
يُّطَاعُ ﴿١٨﴾

19. ಅಲ್ಲಾಹನು ದೃಷ್ಟಿಯ ಚೌರ್ಯಗಳನ್ನೂ ಹೃದಯದೊಳಗೆ ಬಚ್ಚಿಟ್ಟಿರುವ ರಹಸ್ಯಗಳನ್ನೂ ತಿಳಿಯುತ್ತಾನೆ.

يَعْلَمُ خَآئِنَةَ الْاَعْيُنِ وَمَا تُخْفِي
الصُّدُوْرُ ﴿١٩﴾

20. ಅಲ್ಲಾಹ್ ನ್ಯಾಯಪೂರ್ಣ ತೀರ್ಮಾನವೆಸಗುವನು. (ಈ ಬಹು ದೇವವಿಶ್ವಾಸಿಗಳು) ಅಲ್ಲಾಹನನ್ನು ಬಿಟ್ಟು ಯಾರನ್ನು ಪ್ರಾರ್ಥಿಸುತ್ತಾರೋ ಅವರು ಯಾವ ವಿಷಯವನ್ನೂ ತೀರ್ಮಾನಿಸುವವರಲ್ಲ. ನಿಶ್ಚಯವಾಗಿಯೂ ಅಲ್ಲಾಹನೇ ಎಲ್ಲವನ್ನೂ ಕೇಳುವವನೂ ಕಾಣುವವನೂ ಆಗಿರುವನು.

وَاللّٰهُ يَقْضِيْ بِالْحَقِّ ۗ وَالَّذِيْنَ يَدْعُوْنَ
مِنْ دُوْنِهٖ لَا يَقْضُوْنَ بِشَيْءٍ ۗ اِنَّ اللّٰهَ
هُوَ السَّمِيْعُ الْبَصِيْرُ ﴿٢٠﴾

21. ಇವರಿಗಿಂತ ಮುಂಚೆ ಗತಿಸಿದವರ ಪರಿಣಾಮವೇನಾಯಿತೆಂಬುದು ಇವರಿಗೆ ಕಾಣಿಸುವಂತಾಗಲು ಇವರು ಭೂಮಿಯಲ್ಲೆಂದೂ ಸಂಚರಿಸಿಲ್ಲವೇ? ಅವರು ಇವರಿಗಿಂತ ಹೆಚ್ಚು ಬಲಶಾಲಿಗಳಾಗಿದ್ದರು ಮತ್ತು ಇವರಿಗಿಂತ ಭದ್ರ ಸ್ಮಾರಕಗಳನ್ನು ಭೂಮಿಯಲ್ಲಿ ಬಿಟ್ಟು ಹೋಗಿರುವರು. ಆದರೆ ಅಲ್ಲಾಹನು ಅವರನ್ನು ಅವರ ಪಾಪಗಳಿಗಾಗಿ ಹಿಡಿದು ಬಿಟ್ಟನು. ಅವರನ್ನು ಅಲ್ಲಾಹನಿಂದ ರಕ್ಷಿಸುವವನಾರೂ ಇರಲಿಲ್ಲ.

اَوَلَمْ يَسِيْرُوْا فِي الْاَرْضِ فَيَنْظُرُوْا
كَيْفَ كَانَ عَاقِبَةُ الَّذِيْنَ كَانُوْا
مِنْ قَبْلِهِمْ ۗ كَانُوْا هُمْ اَشَدَّ مِنْهُمْ
قُوَّةً وَّاٰثَارًا فِي الْاَرْضِ فَاَخَذَهُمُ
اللّٰهُ بِذُنُوْبِهِمْ ۗ وَمَا كَانَ لَهُمْ
مِّنَ اللّٰهِ مِنْ وَّاقٍ ﴿٢١﴾

22. ಅವರ ಗತಿ ಹೀಗಾದುದೇಕೆಂದರೆ ಅವರ ಬಳಿಗೆ ಅವರ ಸಂದೇಶ ವಾಹಕರು ಸುಸ್ಪಷ್ಟ ನಿದರ್ಶನಗಳನ್ನು[3] ತಂದಿದ್ದರು. ಅವರು ನಿರಾಕರಿಸಿಬಿಟ್ಟರು. ಕೊನೆಗೆ ಅಲ್ಲಾಹನು ಅವರನ್ನು ಹಿಡಿದು ಬಿಟ್ಟನು. ನಿಶ್ಚಯವಾಗಿಯೂ ಅವನು ಪ್ರಬಲನೂ ಕಠಿಣವಾಗಿ ಶಿಕ್ಷಿಸುವವನೂ ಆಗಿರುತ್ತಾನೆ.

ذٰلِكَ بِاَنَّهُمْ كَانَتْ تَّاْتِيْهِمْ رُسُلُهُمْ
بِالْبَيِّنٰتِ فَكَفَرُوْا فَاَخَذَهُمُ اللّٰهُ ۗ
اِنَّهٗ قَوِيٌّ شَدِيْدُ الْعِقَابِ ﴿٢٢﴾

23-24. ನಾವು ಮೂಸಾರನ್ನು ಫಿರ್‌ಔನ್, ಹಾಮಾನ್ ಮತ್ತು ಕಾರೂನ್‌ರ ಕಡೆಗೆ, ನಮ್ಮ ನಿದರ್ಶನಗಳು ಹಾಗೂ ಸುವ್ಯಕ್ತವಾದ ಪ್ರಮಾಣದೊಂದಿಗೆ ರವಾನಿಸಿದೆವು. ಆದರೆ ಅವರು, "ಮಾಟಗಾರ, ಸುಳ್ಳುಗಾರ" ಎಂದರು.

وَلَقَدْ اَرْسَلْنَا مُوْسٰى بِاٰيٰتِنَا
وَسُلْطٰنٍ مُّبِيْنٍ ﴿٢٣﴾
اِلٰى فِرْعَوْنَ وَهَامٰنَ وَقَارُوْنَ
فَقَالُوْا سٰحِرٌ كَذَّابٌ ﴿٢٤﴾

3. 'ಬಯ್ಯಿನಾತ್' ಎಂದರೆ ಮೂರು ವಿಷಯಗಳಾಗಿವೆ. ಮೊದಲನೆಯದಾಗಿ ಅವರು ಅಲ್ಲಾಹನ ವತಿಯಿಂದ ನೇಮಿಸಲ್ಪಟ್ಟವರು ಎಂಬುದಕ್ಕೆ ಇರುವ ಸುಸ್ಪಷ್ಟ ನಿದರ್ಶನಗಳು. ಎರಡನೆಯದಾಗಿ ಅವರ ಬೋಧನೆಗಳು ಸತ್ಯವಾದುದೆಂದು ಸಾಬೀತುಪಡಿಸುವ ಸುಸ್ಪಷ್ಟ ಆಧಾರ ಪ್ರಮಾಣಗಳು. ಮೂರನೆಯದಾಗಿ ಜೀವನದ ಸಮಸ್ಯೆ ಮತ್ತು ವ್ಯವಹಾರಗಳ ಕುರಿತು ಸುವ್ಯಕ್ತ ಮಾರ್ಗದರ್ಶನಗಳು. ಅದನ್ನು ನೋಡಿದ ಪ್ರತಿಯೊಬ್ಬ ವ್ಯಕ್ತಿಗೂ ಇಂತಹ ಪಾವನ ಬೋಧನೆಗಳನ್ನು ಯಾವುದೇ ಸುಳ್ಳುಗಾರ ಅಥವಾ ಸ್ವಾರ್ಥಿಯಾದ ವ್ಯಕ್ತಿಗೆ ನೀಡಲು ಸಾಧ್ಯವಿಲ್ಲ ಎಂದು ಮನವರಿಕೆಯಾಗಬೇಕು.

25. ತರುವಾಯ ಅವರು ನಮ್ಮ ಕಡೆಯಿಂದ ಸತ್ಯವನ್ನು ಅವರ ಮುಂದೆ ತಂದಾಗ ಅವರು, "ವಿಶ್ವಾಸವಿರಿಸಿ ಇವನ ಜೊತೆ ಸೇರಿಕೊಂಡವರೆಲ್ಲರ ಗಂಡು ಮಕ್ಕಳನ್ನು ವಧಿಸಿರಿ ಮತ್ತು ಹೆಣ್ಣು ಮಕ್ಕಳನ್ನು ಬದುಕಿರಲು ಬಿಡಿರಿ" ಎಂದರು. ಆದರೆ ಸತ್ಯ ನಿಷೇಧಿಗಳ ಕುತಂತ್ರವು ವ್ಯರ್ಥವಾಗಿಯೇ ಹೋಯಿತು.

فَلَمَّا جَاءَهُم بِالْحَقِّ مِنْ عِندِنَا قَالُوا اقْتُلُوا أَبْنَاءَ الَّذِينَ آمَنُوا مَعَهُ وَاسْتَحْيُوا نِسَاءَهُمْ ۚ وَمَا كَيْدُ الْكَافِرِينَ إِلَّا فِي ضَلَالٍ ﴿٢٥﴾

26. ಒಂದು ದಿನ ಫಿರ್‌ಔನನು ತನ್ನ ಆಸ್ಥಾನದವರೊಡನೆ, "ನನ್ನನ್ನು ಬಿಡಿರಿ, ನಾನು ಈ ಮೂಸಾನನ್ನು ವಧಿಸಿ ಬಿಡುತ್ತೇನೆ. ಇವನು ತನ್ನ ಪ್ರಭುವನ್ನು ಕರೆದು ನೋಡಲಿ, ಇವನು ನಿಮ್ಮ ಧರ್ಮವನ್ನು ಬದಲಿಸಿ ಬಿಡುವನು ಅಥವಾ ದೇಶದಲ್ಲಿ ಗೊಂದಲವನ್ನುಂಟು ಮಾಡುವನು ಎಂಬ ಭಯ ನನಗೆ ಉಂಟಾಗಿದೆ" ಎಂದನು.

وَقَالَ فِرْعَوْنُ ذَرُونِي أَقْتُلْ مُوسَىٰ وَلْيَدْعُ رَبَّهُ ۖ إِنِّي أَخَافُ أَن يُبَدِّلَ دِينَكُمْ أَوْ أَن يُظْهِرَ فِي الْأَرْضِ الْفَسَادَ ﴿٢٦﴾

27. ಆಗ ಮೂಸಾ, "ವಿಚಾರಣೆಯ ದಿನದ ಮೇಲೆ ವಿಶ್ವಾಸವಿರಿಸದಿರುವಂತಹ ಪ್ರತಿಯೊಬ್ಬ ದುರಹಂಕಾರಿಯ ವಿರುದ್ಧ ನಾನು ನನ್ನ ಪ್ರಭು ಹಾಗೂ ನಿಮ್ಮ ಪ್ರಭುವಿನ ಅಭಯ ಪಡೆದಿರುತ್ತೇನೆ" ಎಂದರು.

وَقَالَ مُوسَىٰ إِنِّي عُذْتُ بِرَبِّي وَرَبِّكُم مِّن كُلِّ مُتَكَبِّرٍ لَّا يُؤْمِنُ بِيَوْمِ الْحِسَابِ ﴿٢٧﴾ ع

28. ಈ ಸಂದರ್ಭದಲ್ಲಿ ತನ್ನ ಸತ್ಯವಿಶ್ವಾಸವನ್ನು ಬಚ್ಚಿಟ್ಟುಕೊಂಡಿದ್ದ ಫಿರ್‌ಔನನ ವಂಶದ ಓರ್ವ ಸತ್ಯವಿಶ್ವಾಸಿಯು ಹೀಗೆ ಹೇಳಿದನು, "ನನ್ನ ಪ್ರಭು ಅಲ್ಲಾಹನಾಗಿರುತ್ತಾನೆಂದು ಹೇಳಿದುದಕ್ಕಾಗಿ ಮಾತ್ರ ನೀವು ಒಬ್ಬನನ್ನು ವಧಿಸಿ ಬಿಡುವಿರಾ? ವಸ್ತುತಃ ಅವರು ನಿಮ್ಮ ಪ್ರಭುವಿನ ಕಡೆಯಿಂದ ನಿಮ್ಮ ಬಳಿಗೆ ಸುವ್ಯಕ್ತ ಪ್ರಮಾಣಗಳನ್ನು ತಂದಿದ್ದಾರೆ. ಅವರು ಸುಳ್ಳುಗಾರರಾಗಿದ್ದರೆ ಅವರ ಸುಳ್ಳು ಸ್ವಯಂ ಅವರ ಮೇಲೆಯೇ ತಿರುಗಿ ಬೀಳುವುದು. ಅವರು ಸತ್ಯವಾದಿಯಾಗಿದ್ದರೆ ಯಾವ ಭಯಾನಕ ದುಷ್ಪರಿಣಾಮಗಳ ಕುರಿತು ಅವರು ನಿಮ್ಮನ್ನು ಎಚ್ಚರಿಸುತ್ತಿರುವರೋ ಅವುಗಳಲ್ಲಿ ಕೆಲವಂತು ನಿಮ್ಮ ಮೇಲೆ ಖಂಡಿತವಾಗಿಯೂ ಬಂದು ಬಿಡುವುವು. ಮಿತಿ ಮೀರುವಾತನಿಗೆ ಮತ್ತು ಸುಳ್ಳುಗಾರನಿಗೆ ಅಲ್ಲಾಹನು ಸನ್ಮಾರ್ಗ ದರ್ಶನ ನೀಡುವುದಿಲ್ಲ."

وَقَالَ رَجُلٌ مُّؤْمِنٌ مِّنْ آلِ فِرْعَوْنَ يَكْتُمُ إِيمَانَهُ أَتَقْتُلُونَ رَجُلًا أَن يَقُولَ رَبِّيَ اللَّهُ وَقَدْ جَاءَكُم بِالْبَيِّنَاتِ مِن رَّبِّكُمْ ۖ وَإِن يَكُ كَاذِبًا فَعَلَيْهِ كَذِبُهُ ۖ وَإِن يَكُ صَادِقًا يُصِبْكُم بَعْضُ الَّذِي يَعِدُكُمْ ۖ إِنَّ اللَّهَ لَا يَهْدِي مَنْ هُوَ مُسْرِفٌ كَذَّابٌ ﴿٢٨﴾

29. ನನ್ನ ಜನಾಂಗ ಬಾಂಧವರೇ, "ಇಂದು ನಿಮಗೆ ಅಧಿಕಾರ ಪ್ರಾಪ್ತವಿದೆ ಮತ್ತು ಭೂಮಿಯಲ್ಲಿ ನೀವು ಮೇಲುಗೈಯುಳ್ಳವರಾಗಿದ್ದೀರಿ. ಆದರೆ, ಅಲ್ಲಾಹನ ಯಾತನೆ ನಮ್ಮ ಮೇಲೆ ಬಂದು ಬಿಟ್ಟರೆ ಯಾರು ತಾನೇ ನಮಗೆ ನೆರವಾಗಬಲ್ಲರು?" ಆಗ ಫಿರ್‌ಔನನು, "ನಾನು ನನಗೆ ಯುಕ್ತ ಕಂಡ ಸಲಹೆಯನ್ನೇ ನಿಮಗೆ ನೀಡುತ್ತಿದ್ದೇನೆ

يَا قَوْمِ لَكُمُ الْمُلْكُ الْيَوْمَ ظَاهِرِينَ فِي الْأَرْضِ فَمَن يَنصُرُنَا مِن بَأْسِ اللَّهِ إِن جَاءَنَا ۚ قَالَ فِرْعَوْنُ مَا أُرِيكُمْ إِلَّا مَا أَرَىٰ وَمَا أَهْدِيكُمْ

ಮತ್ತು ಸರಿಯಾದ ಮಾರ್ಗದ ಕಡೆಗೆ ನಾನು ನಿಮಗೆ ಮಾರ್ಗದರ್ಶನ ನೀಡುತ್ತೇನೆ" ಎಂದನು.

إِلَّا سَبِيلَ الرَّشَادِ ﴿٢٩﴾

30. ಆ ಸತ್ಯವಿಶ್ವಾಸಿ ಹೇಳಿದನು, "ನನ್ನ ಜನಾಂಗದವರೇ, ಈ ಮುಂಚೆ ಅನೇಕ ಸಮೂಹಗಳ ಮೇಲೆ ಬಂದೆರಗಿದಂತಹ ದಿನವೇ ನಿಮ್ಮ ಮೇಲೂ ಬಂದು ಬಿಡುವುದೋ ಎಂಬ ಭಯ ನನಗಿದೆ-

وَقَالَ الَّذِيٓ اٰمَنَ يٰقَوْمِ اِنِّيٓ اَخَافُ عَلَيْكُمْ مِّثْلَ يَوْمِ الْاَحْزَابِ ﴿٣٠﴾

31. ಉದಾಹರಣೆಗಾಗಿ ನೂಹರ ಜನಾಂಗ, ಆದ್, ಸಮೂದ್ ಮತ್ತು ಅವರ ನಂತರದ ಜನಾಂಗಗಳ ಮೇಲೆ ಬಂದೆರಗಿದಂತಹ ದಿನ. ವಾಸ್ತವದಲ್ಲಿ ಅಲ್ಲಾಹನಿಗೆ ತನ್ನ ದಾಸರ ಮೇಲೆ ಅಕ್ರಮವೆಸಗ ಬೇಕೆಂಬ ಉದ್ದೇಶವೇನೂ ಇಲ್ಲ.

مِثْلَ دَاْبِ قَوْمِ نُوْحٍ وَّعَادٍ وَّثَمُوْدَ وَالَّذِيْنَ مِنْۢ بَعْدِهِمْ ؕ وَمَا اللّٰهُ يُرِيْدُ ظُلْمًا لِّلْعِبَادِ ﴿٣١﴾

32. ಓ ಜನಾಂಗವೇ! ನಾವು ಗೋಳಾಡುವಂತಹ ದಿನವು ನಿಮ್ಮ ಮೇಲೆ ಬಂದೆರಗಿ ಬಿಡುವುದೋ ಎಂದು ನಾನು ಭಯ ಪಡುತ್ತೇನೆ.

وَيٰقَوْمِ اِنِّيٓ اَخَافُ عَلَيْكُمْ يَوْمَ التَّنَادِ ﴿٣٢﴾

33. ಅಂದು ನೀವು ಪರಸ್ಪರರನ್ನು ಕೂಗಿ ಕರೆಯುವಿರಿ; ಬೆನ್ನು ತಿರುಗಿಸಿ ಓಡುವಿರಿ. ಆದರೆ, ಆಗ ನಿಮ್ಮನ್ನು ಅಲ್ಲಾಹನಿಂದ ರಕ್ಷಿಸುವವರು ಯಾರೂ ಇರಲಾರರು. ವಾಸ್ತವದಲ್ಲಿ ಯಾರನ್ನು ಅಲ್ಲಾಹನು ದಾರಿಗೆಡಿಸಿಬಿಡುವನೋ ಅವನಿಗೆ ಬೇರಾರೂ ದಾರಿ ತೋರಿಸುವವರಿಲ್ಲ."

يَوْمَ تُوَلُّوْنَ مُدْبِرِيْنَ ۚ مَا لَكُمْ مِّنَ اللّٰهِ مِنْ عَاصِمٍ ۚ وَمَنْ يُّضْلِلِ اللّٰهُ فَمَا لَهٗ مِنْ هَادٍ ﴿٣٣﴾

34-35. ಇದಕ್ಕೆ ಮುಂಚೆ ಯೂಸುಫರು ನಿಮ್ಮ ಬಳಿಗೆ ಸುವ್ಯಕ್ತ ನಿದರ್ಶನಗಳನ್ನು ತಂದಿದ್ದರು. ಆದರೆ ನೀವು ಅವರು ತಂದ ಶಿಕ್ಷಣದ ಬಗ್ಗೆ ಸಂಶಯದಲ್ಲೇ ಬಿದ್ದುಬಿಟ್ಟಿರಿ. ತರುವಾಯ ಅವರು ನಿಧನರಾದಾಗ ನೀವು, ಇನ್ನು ಅವರ ಬಳಿಕ ಎಷ್ಟು ಮಾತ್ರಕ್ಕೂ ಅಲ್ಲಾಹನು ಸಂದೇಶವಾಹಕರನ್ನು ಕಳುಹಿಸಲಿಕ್ಕಿಲ್ಲ ಎಂದಿರಿ. ಇದೇ ರೀತಿಯಲ್ಲಿ[4] ಅಲ್ಲಾಹನು, ಮಿತಿಮೀರುವವರನ್ನು, ಸಂಶಯಗ್ರಸ್ತರನ್ನು ಮತ್ತು ತಮ್ಮ ಬಳಿಗೆ ಯಾವುದೇ ಪ್ರಮಾಣವಾಗಲಿ ಪುರಾವೆಯಾಗಲಿ, ಬಂದಿರದಿದ್ದರೂ ಅಲ್ಲಾಹನ ಸೂಕ್ತಗಳ ಬಗ್ಗೆ ಜಗಳ ಮಾಡುವವರನ್ನು ಪಥಭ್ರಷ್ಟತೆಯಲ್ಲಿ

وَلَقَدْ جَآءَكُمْ يُوْسُفُ مِنْ قَبْلُ بِالْبَيِّنٰتِ فَمَا زِلْتُمْ فِيْ شَكٍّ مِّمَّا جَآءَكُمْ بِهٖ ؕ حَتّٰٓى اِذَا هَلَكَ قُلْتُمْ لَنْ يَّبْعَثَ اللّٰهُ مِنْۢ بَعْدِهٖ رَسُوْلًا ؕ كَذٰلِكَ يُضِلُّ اللّٰهُ مَنْ هُوَ مُسْرِفٌ مُّرْتَابُ ﴿٣٤﴾ الَّذِيْنَ يُجَادِلُوْنَ فِيْٓ اٰيٰتِ اللّٰهِ بِغَيْرِ سُلْطٰنٍ اَتٰىهُمْ ؕ كَبُرَ مَقْتًا عِنْدَ اللّٰهِ

4. ಮೇಲ್ನೋಟಕ್ಕೆ ವ್ಯಕ್ತವಾಗುವುದೇನೆಂದರೆ, ಫಿರ್‌ಔನನ ಆಸ್ಥಾನದ ಸತ್ಯವಿಶ್ವಾಸಿಯ ಮಾತಿಗೆ ಪೂರಕವಾಗಿ ಮತ್ತು ವಿವರಣೆಯ ರೂಪದಲ್ಲಿ ಈ ಮಾತನ್ನು ಅಲ್ಲಾಹನು ಹೇಳಿದ್ದಾನೆ.

ಹಾಕಿ ಬಿಡುತ್ತಾನೆ. ಈ ಧೋರಣೆಯು ಅಲ್ಲಾಹ್ ಮತ್ತು ಸತ್ಯ ವಿಶ್ವಾಸಿಗಳ ಬಳಿ ಅತ್ಯಂತ ತಿರಸ್ಕಾರಾರ್ಹವಾಗಿದೆ. ಇದೇ ರೀತಿ ಯಲ್ಲಿ ಅಲ್ಲಾಹ್ ಪ್ರತಿಯೊಬ್ಬ ಅಹಂಕಾರಿ ಹಾಗೂ ಮದಾಂಧನ ಹೃದಯಕ್ಕೆ ಮುದ್ರೆಯೊತ್ತಿ ಬಿಡುತ್ತಾನೆ."

وَعِندَ الَّذِينَ آمَنُوا ۚ كَذَٰلِكَ يَطْبَعُ
اللَّهُ عَلَىٰ كُلِّ قَلْبِ مُتَكَبِّرٍ جَبَّارٍ ﴿٣٥﴾

36-37. ಫಿರ್‌ಔನ್ ಹೇಳಿದನು: "ಹಾಮಾನ್, ನಾನು ಮಾರ್ಗಗಳವರೆಗೆ, ಆಕಾಶಗಳ ಮಾರ್ಗಗಳ ವರೆಗೆ ತಲುಪುವಂತಾಗಲು ಮತ್ತು ಮೂಸಾನ ದೇವನನ್ನು ಇಣುಕಿ ನೋಡುವಂತಾಗಲು ನನಗಾಗಿ ಒಂದು ಉನ್ನತ ಕಟ್ಟಡವನ್ನು ನಿರ್ಮಿಸು. ನನಗಂತೂ ಈ ಮೂಸಾ ಸುಳ್ಳುಗಾರನೆಂದೇ ತೋರುತ್ತಾನೆ." ಹೀಗೆ ಫಿರ್‌ಔನ್‌ನಿಗೆ ಅವನ ದುಷ್ಕರ್ಮವು ಮನೋಹರಗೊಳಿಸಲ್ಪಟ್ಟಿತು ಮತ್ತು ಅವನು ಸನ್ಮಾರ್ಗದಿಂದ ತಡೆಯಲ್ಪಟ್ಟನು. ಫಿರ್‌ಔನಿನ ಕುತಂತ್ರ ವೆಲ್ಲಾ (ಸ್ವತಃ ಅವನದೇ) ವಿನಾಶಕ್ಕಾಗಿ ವ್ಯಯವಾಯಿತು.

وَقَالَ فِرْعَوْنُ يَا هَامَانُ ابْنِ لِي
صَرْحًا لَّعَلِّي أَبْلُغُ الْأَسْبَابَ ﴿٣٦﴾
أَسْبَابَ السَّمَاوَاتِ فَأَطَّلِعَ إِلَىٰ إِلَٰهِ
مُوسَىٰ وَإِنِّي لَأَظُنُّهُ كَاذِبًا ۚ وَكَذَٰلِكَ
زُيِّنَ لِفِرْعَوْنَ سُوءُ عَمَلِهِ وَصُدَّ
عَنِ السَّبِيلِ ۚ وَمَا كَيْدُ فِرْعَوْنَ
إِلَّا فِي تَبَابٍ ﴿٣٧﴾

38. ಆ ಸತ್ಯವಿಶ್ವಾಸಿ ಹೇಳಿದನು, "ನನ್ನ ಜನಾಂಗದವರೇ, ನನ್ನ ಮಾತನ್ನು ಸ್ವೀಕರಿಸಿರಿ. ನಾನು ನಿಮಗೆ ಸರಿಯಾದ ಮಾರ್ಗವನ್ನೇ ತೋರಿಸುತ್ತೇನೆ.

وَقَالَ الَّذِي آمَنَ يَا قَوْمِ اتَّبِعُونِ
أَهْدِكُمْ سَبِيلَ الرَّشَادِ ﴿٣٨﴾

39. ಓ ಜನಾಂಗವೇ! ಈ ಲೌಕಿಕ ಜೀವನವು ಕೆಲವೇ ದಿನಗಳ ಸಾಧನವಾಗಿದೆ. ಶಾಶ್ವತ ನಿವಾಸವು ಪರಲೋಕವೇ ಆಗಿದೆ.

يَا قَوْمِ إِنَّمَا هَٰذِهِ الْحَيَاةُ الدُّنْيَا مَتَاعٌ
وَإِنَّ الْآخِرَةَ هِيَ دَارُ الْقَرَارِ ﴿٣٩﴾

40. ದೋಷವೆಸಗಿದವನಿಗೆ ಅವನು ಮಾಡಿದ ದೋಷದಷ್ಟೇ ಪ್ರತಿಫಲ ಸಿಗುವುದು. ಸತ್ಕರ್ಮವೆಸಗಿದವನು ಪುರುಷನಿರಲಿ ಸ್ತ್ರೀ ಇರಲಿ, ಸತ್ಯವಿಶ್ವಾಸಿಯಾಗಿದ್ದರೆ ಇಂತಹವರೆಲ್ಲರೂ ಸ್ವರ್ಗವನ್ನು ಪ್ರವೇಶಿಸು ವರು, ಅಲ್ಲಿ ಅವರಿಗೆ ಅಪಾರ ಜೀವನಾಧಾರ ನೀಡಲ್ಪಡುವುದು.

مَنْ عَمِلَ سَيِّئَةً فَلَا يُجْزَىٰ إِلَّا
مِثْلَهَا ۖ وَمَنْ عَمِلَ صَالِحًا مِّن
ذَكَرٍ أَوْ أُنثَىٰ وَهُوَ مُؤْمِنٌ فَأُولَٰئِكَ
يَدْخُلُونَ الْجَنَّةَ يُرْزَقُونَ فِيهَا
بِغَيْرِ حِسَابٍ ﴿٤٠﴾

41. ಓ ಜನಾಂಗವೇ, ಇದೇನು, ನಾನಂತು ನಿಮ್ಮನ್ನು ವಿಮೋಚನೆಯ ಕಡೆಗೆ ಕರೆಯುತ್ತಿದ್ದೇನೆ ಮತ್ತು ನೀವಾದರೋ ನನ್ನನ್ನು ನರಕಾಗ್ನಿಯತ್ತ ಆಹ್ವಾನಿಸುತ್ತಿರುವಿರಿ!

وَيَا قَوْمِ مَا لِي أَدْعُوكُمْ إِلَى النَّجَاةِ وَ
تَدْعُونَنِي إِلَى النَّارِ ﴿٤١﴾

42. ನಾನು ಅಲ್ಲಾಹನನ್ನು ನಿರಾಕರಿಸಬೇಕೆಂದೂ ಅವನೊಂದಿಗೆ ನಾನರಿ ಯದಂತಹ[5] ಅಸ್ತಿತ್ವಗಳನ್ನು ಸಹಭಾಗಿಗಳಾಗಿ ಮಾಡಬೇಕೆಂದೂ ನೀವು ನನಗೆ ಕರೆ ಕೊಡುತ್ತಿದ್ದೀರಿ. ನಾನಾದರೋ ನಿಮ್ಮನ್ನು

تَدْعُونَنِي لِأَكْفُرَ بِاللَّهِ وَأُشْرِكَ
بِهِ مَا لَيْسَ لِي بِهِ عِلْمٌ وَأَنَا

5. ಅರ್ಥಾತ್- ದೇವತ್ವದಲ್ಲಿ ಅವರಿಗೂ ಪಾಲಿದೆ ಎಂಬುದು ನನಗೆ ತಿಳಿದಿಲ್ಲ.

ಪ್ರಬಲನೂ ಮಹಾ ಕ್ಷಮಾದಾನಿಯೂ ಆಗಿರುವ ಆ ದೇವನ ಕಡೆಗೆ ಕರೆಯುತ್ತಿದ್ದೇನೆ.

أَدْعُوكُمْ إِلَى الْعَزِيزِ الْغَفَّارِ ﴿٤٢﴾

43. ಅಲ್ಲ, ಇದು ಸತ್ಯ. ಇದಕ್ಕೆ ವಿರುದ್ಧ ಸಾಧ್ಯವೇ ಇಲ್ಲ. ನೀವು ನನ್ನನ್ನು ಯಾರ ಕಡೆಗೆ ಕರೆಯುತ್ತಿರುವಿರೋ ಅವರಿಗೆ ಈ ಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಯಾವುದೇ ಕರೆ ಇಲ್ಲ.[6] ನಮಗೆಲ್ಲರಿಗೂ ಅಲ್ಲಾಹನ ಕಡೆಗೇ ಮರಳಿ ಹೋಗಬೇಕಾಗಿದೆ ಮತ್ತು ಮಿತಿಮೀರಿ ನಡೆಯುವವರು ನರಕಾಗ್ನಿಗೆ ಹೋಗಲಿರುವರು.

لَا جَرَمَ أَنَّمَا تَدْعُونَنِي إِلَيْهِ لَيْسَ لَهُ دَعْوَةٌ فِي الدُّنْيَا وَلَا فِي الْآخِرَةِ وَأَنَّ مَرَدَّنَا إِلَى اللَّهِ وَأَنَّ الْمُسْرِفِينَ هُمْ أَصْحَابُ النَّارِ ﴿٤٣﴾

44. ಇಂದು ನಾನು ಹೇಳುತ್ತಿರುವ ಮಾತನ್ನು ನೀವು ಜ್ಞಾಪಿಸಿಕೊಳ್ಳುವ ಕಾಲ ಸದ್ಯದಲ್ಲೇ ಬರಲಿದೆ. ನಾನು ನನ್ನ ವಿಷಯವನ್ನು ಅಲ್ಲಾಹ ನಿಗೆ ಒಪ್ಪಿಸಿ ಬಿಡುತ್ತೇನೆ. ಅವನು ತನ್ನ ದಾಸರ ಮೇಲ್ವಿಚಾರಕ ನಾಗಿರುತ್ತಾನೆ."

فَسَتَذْكُرُونَ مَا أَقُولُ لَكُمْ ۚ وَأُفَوِّضُ أَمْرِي إِلَى اللَّهِ ۚ إِنَّ اللَّهَ بَصِيرٌ بِالْعِبَادِ ﴿٤٤﴾

45. ಕೊನೆಗೆ ಅವರು ಆ ಸತ್ಯವಿಶ್ವಾಸಿಯ ವಿರುದ್ಧ ನಡೆಸಿದ್ದ ಅತ್ಯಂತ ದುಷ್ಟವಾದ ಎಲ್ಲ ಕುತಂತ್ರಗಳಿಂದ ಅಲ್ಲಾಹನು ಅವನನ್ನು ಕಾಪಾಡಿದನು[7] ಮತ್ತು ಫಿರ್‌ಔನನ ಜೊತೆಗಾರರು ಸ್ವಯಂ ಅತ್ಯಂತ ಕೆಟ್ಟ ಯಾತನೆಯ ಸುಳಿಗೆ ಸಿಕ್ಕಿಬಿಟ್ಟರು.

فَوَقَاهُ اللَّهُ سَيِّئَاتِ مَا مَكَرُوا ۖ وَحَاقَ بِآلِ فِرْعَوْنَ سُوءُ الْعَذَابِ ﴿٤٥﴾

46. ನರಕಾಗ್ನಿ! ಅದರ ಮುಂದೆ ಅವರು ಬೆಳಗು ಬೈಗುಗಳಲ್ಲಿ ತರಲ್ಪಡುತ್ತಾರೆ. ಪುನರುತ್ಥಾನದ ಘಳಿಗೆ ಬಂದಾಗ ಫಿರ್‌ಔನನ ಜನರನ್ನು ಅತ್ಯುಗ್ರ ಯಾತನೆಯಲ್ಲಿ ಪ್ರವೇಶಗೊಳಿಸಿರೆಂದು ಅಪ್ಪಣೆಯಾಗುವುದು.

النَّارُ يُعْرَضُونَ عَلَيْهَا غُدُوًّا وَعَشِيًّا ۖ وَيَوْمَ تَقُومُ السَّاعَةُ أَدْخِلُوا آلَ فِرْعَوْنَ أَشَدَّ الْعَذَابِ ﴿٤٦﴾

47. ಇವರು ನರಕಾಗ್ನಿಯಲ್ಲಿ ಪರಸ್ಪರ ಜಗಳಾಡುತ್ತಿರುವ ಸನ್ನಿವೇಶವನ್ನು ಊಹಿಸಿರಿ. ಭೂಲೋಕದಲ್ಲಿ ದುರ್ಬಲರಾಗಿದ್ದವರು ದೊಡ್ಡಸ್ತಿಕೆ

وَإِذْ يَتَحَاجُّونَ فِي النَّارِ فَيَقُولُ الضُّعَفَاءُ لِلَّذِينَ اسْتَكْبَرُوا إِنَّا كُنَّا لَكُمْ تَبَعًا فَهَلْ

6. ಈ ವಾಕ್ಯಕ್ಕೆ ಅನೇಕ ಅರ್ಥಗಳಿರಲು ಸಾಧ್ಯವಿದೆ. ಮೊದಲನೆಯದಾಗಿ ತಮ್ಮ ದೇವತ್ವವನ್ನು ಒಪ್ಪಿಕೊಳ್ಳುವಂತೆ ದೇವನ ಸೃಷ್ಟಿಗಳಿಗೆ ಕರೆ ಕೊಡುವ ಹಕ್ಕು ಅವರಿಗೆ ಇಹಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಇಲ್ಲ. ಎರಡನೆಯದಾಗಿ ಜನರು ಅವರನ್ನು ಬಲವಂತದಿಂದ ದೇವತ್ವದ ಸ್ಥಾನಕ್ಕೇರಿಸಿದ್ದಾರೆ, ಅನ್ಯಥಾ ಅವರು ಈ ಲೋಕದಲ್ಲಿ ದೇವತ್ವವನ್ನು ವಾದಿಸಿರಲಿಲ್ಲ. ಹಾಗೆಯೇ ಪರಲೋಕದಲ್ಲೂ ಅವರು 'ನಾವು ದೇವರಾಗಿದ್ದೆವು. ನೀವು ನಮ್ಮನ್ನೇಕೆ ನಂಬಲಿಲ್ಲ' ಎಂದು ವಾದಿಸಲಾರರು. ಮೂರನೆಯದಾಗಿ ಅವರೊಡನೆ ಮೊರೆಯಿಡುವುದರಿಂದ ಇಹಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಯಾವುದೇ ಪ್ರಯೋಜನವಾಗಲಾರದು. ಏಕೆಂದರೆ ಅವರು ಯಾವುದೇ ರೀತಿಯ ಅಧಿಕಾರ ಇಲ್ಲದವರು. ಆದ್ದರಿಂದ ಅವರೊಡನೆ ಮೊರೆಯಿಡುವುದು ನಿರರ್ಥಕವಾಗಿದೆ.

7. ಇದರಿಂದ ತಿಳಿದು ಬರುವುದೇನೆಂದರೆ, ಅವನು ಫಿರ್‌ಔನನ ಸಾಮ್ರಾಜ್ಯದಲ್ಲಿ ಪ್ರಮುಖ ವ್ಯಕ್ತಿತ್ವವನ್ನು ಹೊಂದಿದ್ದನು. ಆದ್ದರಿಂದಲೇ ತುಂಬಿದ ಸಭೆಯಲ್ಲಿ ಫಿರ್‌ಔನನ ಮುಂದೆ ಸತ್ಯನುಡಿದಾಗಲೂ ಅವನನ್ನು ಶಿಕ್ಷಿಸುವ ಧೈರ್ಯವನ್ನು ತೋರಲಾಗಿರಲಿಲ್ಲ. ಈ ಕಾರಣದಿಂದಲೇ ಫಿರ್‌ಔನ್ ಮತ್ತು ಅವನ ಬೆಂಬಲಿಗರು ಅವನನ್ನು ಕೊಲ್ಲಲು ಸಂಚು ಹೂಡಬೇಕಾಯಿತು. ಆದರೆ ಅವರ ಈ ತಂತ್ರಗಳನ್ನು ಅಲ್ಲಾಹನು ವಿಫಲಗೊಳಿಸಿದನು.

ತೋರಿಸುತ್ತಿದ್ದವರೊಡನೆ (ಹೀಗೆ) ಹೇಳುವರು, "ನಾವು ನಿಮಗೆ ಅಧೀನರಾಗಿದ್ದೆವು. ಈಗ ನೀವು ಇಲ್ಲಿ ನರಕಾಗ್ನಿಯ ಯಾತನೆಯ ಸ್ವಲ್ಪಾಂಶದಿಂದಾದರೂ ನಮ್ಮನ್ನು ರಕ್ಷಿಸುವಿರಾ?"	أَنْتُمْ مُغْنُونَ عَنَّا نَصِيبًا مِنَ النَّارِ ﴿٤٧﴾
48. ದೊಡ್ಡಸ್ತಿಕೆ ತೋರುತ್ತಿದ್ದವರು (ಹೀಗೆ) ಉತ್ತರ ಕೊಡುವರು:- "ನಾವೆಲ್ಲರೂ ಇಲ್ಲಿ ಒಂದೇ ಸ್ಥಿತಿಯಲ್ಲಿದ್ದೇವೆ. ಅಲ್ಲಾಹನು ದಾಸರ ನಡುವೆ ತೀರ್ಮಾನ ಮಾಡಿ ಬಿಟ್ಟಿರುತ್ತಾನೆ."	قَالَ الَّذِينَ اسْتَكْبَرُوا إِنَّا كُلٌّ فِيهَا إِنَّ اللَّهَ قَدْ حَكَمَ بَيْنَ الْعِبَادِ ﴿٤٨﴾
49. ತರುವಾಯ ನರಕದಲ್ಲಿ ಬಿದ್ದಿರುವವರು ನರಕಪಾಲಕರೊಡನೆ, "ನಮ್ಮ ಯಾತನೆಯಲ್ಲಿ ಒಂದು ದಿನದ ಕಡಿತ ಮಾಡಲಿಕ್ಕಾಗಿ ನಿಮ್ಮ ಪ್ರಭುವನ್ನು ಪ್ರಾರ್ಥಿಸಿರಿ" ಎನ್ನುವರು.	وَقَالَ الَّذِينَ فِي النَّارِ لِخَزَنَةِ جَهَنَّمَ ادْعُوا رَبَّكُمْ يُخَفِّفْ عَنَّا يَوْمًا مِنَ الْعَذَابِ ﴿٤٩﴾
50. ಆಗ ಅವರು, "ನಿಮ್ಮ ಬಳಿಗೆ ನಿಮ್ಮ ಸಂದೇಶವಾಹಕರು ಸುವ್ಯಕ್ತ ನಿದರ್ಶನಗಳೊಂದಿಗೆ ಬರುತ್ತಲಿರಲಿಲ್ಲವೇ?" ಎಂದು ಕೇಳುವರು. ಆಗ ಅವರು 'ಹೌದು' ಎನ್ನುವರು. ಆಗ ನರಕ ಪಾಲಕರು, "ಹಾಗಾದರೆ, ನೀವೇ ಪ್ರಾರ್ಥಿಸಿರಿ. ಸತ್ಯನಿಷೇಧಿಗಳ ಪ್ರಾರ್ಥನೆ ವ್ಯರ್ಥವೇ ಆಗಲಿದೆ" ಎನ್ನುವರು.	قَالُوا أَوَلَمْ تَكُ تَأْتِيكُمْ رُسُلُكُمْ بِالْبَيِّنَاتِ قَالُوا بَلَىٰ قَالُوا فَادْعُوا وَمَا دُعَاءُ الْكَافِرِينَ إِلَّا فِي ضَلَالٍ ﴿٥٠﴾
51. ನಾವು ಖಂಡಿತವಾಗಿಯೂ ನಮ್ಮ ಸಂದೇಶವಾಹಕರಿಗೆ ಹಾಗೂ ಸತ್ಯವಿಶ್ವಾಸಿಗಳಿಗೆ ಈ ಲೋಕದ ಜೀವನದಲ್ಲಿಯೂ ಸಹಾಯ ಮಾಡುತ್ತೇವೆ ಮತ್ತು ಸಾಕ್ಷಿದಾರರು ಎದ್ದು ನಿಲ್ಲುವ ದಿನದಂದೂ ಮಾಡುವೆವು-	إِنَّا لَنَنْصُرُ رُسُلَنَا وَالَّذِينَ آمَنُوا فِي الْحَيَاةِ الدُّنْيَا وَيَوْمَ يَقُومُ الْأَشْهَادُ ﴿٥١﴾
52. ಅಂದು ಅಕ್ರಮಿಗಳಿಗೆ ಅವರ ನೆಪಗಳು ಯಾವುದೇ ಪ್ರಯೋಜನ ಕೊಡಲಾರವು. ಅವರ ಮೇಲೆ ಶಾಪವೆರಗುವುದು ಮತ್ತು ಅತ್ಯಂತ ನಿಕೃಷ್ಟ ವಾಸಸ್ಥಾನವು ಅವರ ಪಾಲಿಗೆ ಬರುವುದು.	يَوْمَ لَا يَنْفَعُ الظَّالِمِينَ مَعْذِرَتُهُمْ وَلَهُمُ اللَّعْنَةُ وَلَهُمْ سُوءُ الدَّارِ ﴿٥٢﴾
53. ಕೊನೆಗೆ ನಾವು ಮೂಸಾರಿಗೆ ಮಾರ್ಗದರ್ಶನ ಮಾಡಿದೆವು ಮತ್ತು ಬನೀಇಸ್ರಾಈಲರನ್ನು ಗ್ರಂಥದ ವಾರೀಸುದಾರರಾಗಿ ಮಾಡಿದೆವು-	وَلَقَدْ آتَيْنَا مُوسَى الْهُدَىٰ وَأَوْرَثْنَا بَنِي إِسْرَائِيلَ الْكِتَابَ ﴿٥٣﴾
54. ಅದು ಬುದ್ಧಿಜೀವಿಗಳಿಗೆ ಸನ್ಮಾರ್ಗದರ್ಶನ ಹಾಗೂ ಬೋಧನೆ ಯಾಗಿತ್ತು.	هُدًى وَذِكْرَىٰ لِأُولِي الْأَلْبَابِ ﴿٥٤﴾
55. ಆದುದರಿಂದ ಸಂದೇಶವಾಹಕರೇ, ತಾಳ್ಮೆ ವಹಿಸಿರಿ. ಅಲ್ಲಾಹನ ವಾಗ್ದಾನವು ಪರಮ ಸತ್ಯವಾಗಿದೆ. ನಿಮ್ಮ ತಪ್ಪಿನ ಬಗ್ಗೆ ಕ್ಷಮೆ	فَاصْبِرْ إِنَّ وَعْدَ اللَّهِ حَقٌّ وَاسْتَغْفِرْ لِذَنْبِكَ وَسَبِّحْ بِحَمْدِ رَبِّكَ بِالْعَشِيِّ

ಯಾಚಿಸಿರಿ[8] ಮತ್ತು ಬೆಳಗು ಬೈಗುಗಳಲ್ಲಿ ನಿಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನನ್ನು ಸ್ತುತಿಸುತ್ತಿರಿ.

وَالْإِبْكَارِ ﴿٥٥﴾

56. ವಾಸ್ತವದಲ್ಲಿ ಯಾವುದೇ ಪ್ರಮಾಣವಾಗಲಿ, ಆಧಾರವಾಗಲಿ ತಮ್ಮ ಬಳಿ ಬಾರದಿದ್ದರೂ ಅಲ್ಲಾಹನ ಸೂಕ್ತಗಳ ವಿಷಯದಲ್ಲಿ ಜಗಳವಾಡುವವರ ಹೃದಯಗಳಲ್ಲಿ ಅಹಂಕಾರ ತುಂಬಿಕೊಂಡಿದೆ. ಆದರೆ ಅವರು ತಾವು ಅಹಂಕಾರ ಪಡುವಂತಹ ಔನ್ನತ್ಯವನ್ನು ತಲುಪುವವರಲ್ಲ. ಅಲ್ಲಾಹನ ಅಭಯವನ್ನು ಯಾಚಿಸಿರಿ. ಅವನು ಸರ್ವವನ್ನೂ ಕೇಳುವವನೂ ಸರ್ವವನ್ನೂ ನೋಡುವವನೂ ಆಗಿರುತ್ತಾನೆ.

إِنَّ الَّذِينَ يُجَادِلُونَ فِي آيَاتِ اللَّهِ
بِغَيْرِ سُلْطَانٍ أَتَاهُمْ ۙ إِنْ فِي صُدُورِهِمْ
إِلَّا كِبْرٌ مَا هُمْ بِبَالِغِيهِ ۚ فَاسْتَعِذْ
بِاللَّهِ ۖ إِنَّهُ هُوَ السَّمِيعُ الْبَصِيرُ ﴿٥٦﴾

57. ಖಂಡಿತವಾಗಿಯೂ ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸುವುದು ಮಾನವನನ್ನು ಸೃಷ್ಟಿಸುವುದಕ್ಕಿಂತ ದೊಡ್ಡದಾದ ಕಾರ್ಯವಾಗಿದೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ.

لَخَلْقُ السَّمَاوَاتِ وَالْأَرْضِ أَكْبَرُ مِنْ
خَلْقِ النَّاسِ وَلَٰكِنَّ أَكْثَرَ النَّاسِ
لَا يَعْلَمُونَ ﴿٥٧﴾

58. ಕುರುಡನೂ ಕಣ್ಣಿದ್ದವನೂ ಸಮಾನರಾಗಲಾರರು- ಸತ್ಯವಿಶ್ವಾಸಿಗಳಾದ ಸದಾಚಾರಿಗಳು ಹಾಗೂ ದುಷ್ಕರ್ಮಿಗಳು ಸಮಾನರಾಗಲಾರರು. ಆದರೆ ನೀವು ಸ್ವಲ್ಪವೇ ಅರ್ಥ ಮಾಡಿಕೊಳ್ಳುತ್ತೀರಿ.

وَمَا يَسْتَوِي الْأَعْمَىٰ وَالْبَصِيرُ ۙ
وَالَّذِينَ آمَنُوا وَعَمِلُوا الصَّالِحَاتِ وَ
لَا الْمُسِيءُ ۚ قَلِيلًا مَا تَتَذَكَّرُونَ ﴿٥٨﴾

59. ಖಂಡಿತವಾಗಿಯೂ ಪುನರುತ್ಥಾನದ ಘಳಿಗೆ ಬರಲಿದೆ. ಅದು ಬರುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ ಹೆಚ್ಚಿನವರು ನಂಬುವುದಿಲ್ಲ.

إِنَّ السَّاعَةَ لَآتِيَةٌ لَا رَيْبَ فِيهَا
وَلَٰكِنَّ أَكْثَرَ النَّاسِ لَا يُؤْمِنُونَ ﴿٥٩﴾

60. ನಿಮ್ಮ ಪ್ರಭು ಹೀಗೆ ಹೇಳುತ್ತಾನೆ- ನನ್ನನ್ನು ಪ್ರಾರ್ಥಿಸಿರಿ. ನಾನು ನಿಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುವೆನು.[9] ಅಹಂಕಾರಪಟ್ಟು ನನ್ನ ದಾಸ್ಯ ಮತ್ತು ಆರಾಧನೆಯಿಂದ ವಿಮುಖರಾಗುವವರು

وَقَالَ رَبُّكُمُ ادْعُونِي أَسْتَجِبْ لَكُمْ ۚ
إِنَّ الَّذِينَ يَسْتَكْبِرُونَ عَنْ عِبَادَتِي

8. ಈ ಮಾತನ್ನು ಹೇಳಲಾಗಿರುವ ಹಿನ್ನೆಲೆಯನ್ನು ಗಮನಿಸಿದರೆ ಇಲ್ಲಿ 'ಅಸಹನೆ'ಯನ್ನು 'ತಪ್ಪು' ಎಂದು ಹೇಳಲಾಗಿದೆಯೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ತೀವ್ರ ಪ್ರತಿರೋಧದ ವಾತಾವರಣದಲ್ಲಿ, ಅದರಲ್ಲೂ ವಿಶೇಷವಾಗಿ ತಮ್ಮ ಸಂಗಾತಿಗಳ ಮೇಲೆ ಮಾಡಲಾಗುವ ಅನ್ಯಾಯವನ್ನು ನೋಡಿ ಪ್ರವಾದಿವರ್ಯರಲ್ಲಿ(ಸ) ಅಸಹನೆಯ ಮನೋಭಾವ ಉಂಟಾಗಿತ್ತು. ಸತ್ಯನಿಷೇಧಿಗಳು ಸತ್ಯವನ್ನು ಒಪ್ಪಿಕೊಳ್ಳುವಂತಾಗಲು ಶೀಘ್ರವೇ ಪವಾಡವೊಂದು ತೋರಿಸಲ್ಪಡಬೇಕು ಅಥವಾ ಪ್ರತಿರೋಧದ ಬಿರುಗಾಳಿ ಶಾಂತವಾಗುವಂತಹ ಯಾವುದಾದರೂ ಬೆಳವಣಿಗೆ ಅಲ್ಲಾಹನ ವತಿಯಿಂದ ಆಗಬೇಕು ಎಂದು ಪ್ರವಾದಿವರ್ಯರು(ಸ) ಬಯಸುತ್ತಿದ್ದರು. ಈ ಬಯಕೆ ಪಶ್ಚಾತ್ತಾಪ ಪಡಬೇಕಾದ ಮತ್ತು ಕ್ಷಮೆಯಾಚಿಸಬೇಕಾದಂತಹ ತಪ್ಪೇನೂ ಆಗಿರಲಿಲ್ಲ. ಆದರೆ ಪ್ರವಾದಿವರ್ಯರನ್ನು(ಸ) ಅಲ್ಲಾಹನು ಯಾವ ಉನ್ನತ ಪದವಿಯಲ್ಲಿ ನೇಮಿಸಿದ್ದನೋ ಅದು ತೀವ್ರತರವಾದ ದೃಢಚಿತ್ತತೆಯನ್ನು ಅಪೇಕ್ಷಿಸುತ್ತದೆ. ಆದ್ದರಿಂದ ಕಿಂಚಿತ್ ಅಸಹನೆಯೂ ಅವರ ಸ್ಥಾನಕ್ಕೆ ತಕ್ಕುದಾದುದಲ್ಲವೆಂದು ಅಲ್ಲಾಹನು ಭಾವಿಸಿದನು. ಆದ್ದರಿಂದಲೇ ಈ ದೌರ್ಬಲ್ಯಕ್ಕಾಗಿ ನಿಮ್ಮ ಪ್ರಭುವಿನೊಡನೆ ಕ್ಷಮೆ ಯಾಚಿಸಿರಿ. ತಮ್ಮ ನಿರ್ಧಾರದಲ್ಲಿ ಬಂಡೆಯಂತೆ ಅಚಲವಾಗಿ ನಿಲ್ಲಿರಿ. ನಿಮ್ಮಂತಹ ಉನ್ನತ ಪದವಿಯ ವ್ಯಕ್ತಿಗೆ ತಕ್ಕುದಾದ ವಿಷಯ ಇದುವೇ ಆಗಿದೆ ಎಂದು ಅವರೊಡನೆ ಹೇಳಲಾಗುತ್ತಿದೆ.

9. ಅರ್ಥಾತ್- ಪ್ರಾರ್ಥನೆಯನ್ನು ಸ್ವೀಕರಿಸುವ ಅಧಿಕಾರಗಳೆಲ್ಲವೂ ನನಗೇ ಸೇರಿದೆ, ಆದ್ದರಿಂದ ನೀವು ಇತರರಲ್ಲಿ ಪ್ರಾರ್ಥಿಸದಿರಿ. ನನ್ನಲ್ಲಿಯೇ ಪ್ರಾರ್ಥಿಸಿರಿ.

سَيَدْخُلُوْنَ جَهَنَّمَ دٰخِرِيْنَ ۝٦٠

ಖಂಡಿತವಾಗಿಯೂ ಅಪಮಾನಿತರಾಗಿ ನರಕದಲ್ಲಿ ಪ್ರವೇಶಿಸುವರು.[10]

اَللّٰهُ الَّذِيْ جَعَلَ لَكُمُ الَّيْلَ لِتَسْكُنُوْا فِيْهِ وَالنَّهَارَ مُبْصِرًا ۭ اِنَّ اللّٰهَ لَذُوْ فَضْلٍ عَلَى النَّاسِ وَلٰكِنَّ اَكْثَرَ النَّاسِ لَا يَشْكُرُوْنَ ۝٦١

61. ನೀವು ವಿಶ್ರಾಂತಿ ಪಡೆಯಲೆಂದು ನಿಮಗಾಗಿ ರಾತ್ರಿಯನ್ನುಂಟು ಮಾಡಿದವನೂ ಹಗಲನ್ನು ಪ್ರಕಾಶಮಾನವಾಗಿ ಮಾಡಿದವನೂ ಅಲ್ಲಾಹನೇ ತಾನೆ. ವಾಸ್ತವದಲ್ಲಿ ಅಲ್ಲಾಹನು ಜನರ ಮೇಲೆ ಮಹಾ ಅನುಗ್ರಹ ತೋರುವವನಾಗಿರುತ್ತಾನೆ. ಆದರೆ ಹೆಚ್ಚಿನವರು ಕೃತಜ್ಞತೆ ಸಲ್ಲಿಸುವುದಿಲ್ಲ.

ذٰلِكُمُ اللّٰهُ رَبُّكُمْ خَالِقُ كُلِّ شَيْءٍ ۘ لَآ اِلٰهَ اِلَّا هُوَ ۡ فَاَنّٰى تُؤْفَكُوْنَ ۝٦٢ وقف لازم

62. (ನಿಮಗಾಗಿ ಇಷ್ಟನ್ನೆಲ್ಲಾ ಮಾಡಿರುವ) ಅಲ್ಲಾಹನೇ ನಿಮ್ಮ ಪ್ರಭು. ಸಕಲ ವಸ್ತುಗಳ ಕರ್ತೃ. ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ಹೀಗಿರುತ್ತಾ ಎಲ್ಲಿಂದ ನೀವು ದಾರಿಗೆಡಿಸಲ್ಪಡುತ್ತಿರುವಿರಿ?

كَذٰلِكَ يُؤْفَكُ الَّذِيْنَ كَانُوْا بِاٰيٰتِ اللّٰهِ يَجْحَدُوْنَ ۝٦٣

63. ಅಲ್ಲಾಹನ ವಚನಗಳನ್ನು ನಿರಾಕರಿಸುತ್ತಿದ್ದವರೆಲ್ಲರೂ ಇದೇ ರೀತಿಯಲ್ಲಿ ವಂಚಿಸಲ್ಪಡುತ್ತಿದ್ದರು.

اَللّٰهُ الَّذِيْ جَعَلَ لَكُمُ الْاَرْضَ قَرَارًا وَّالسَّمَاۗءَ بِنَاۗءً وَّصَوَّرَكُمْ فَاَحْسَنَ صُوَرَكُمْ وَرَزَقَكُمْ مِّنَ الطَّيِّبٰتِ ۭ ذٰلِكُمُ اللّٰهُ رَبُّكُمْ ښ فَتَبٰرَكَ اللّٰهُ رَبُّ الْعٰلَمِيْنَ ۝٦٤

64. ಅಲ್ಲಾಹನೇ ಭೂಮಿಯನ್ನು ನಿಮ್ಮ ಪಾಲಿಗೆ ವಾಸಸ್ಥಾನವಾಗಿ ಮಾಡಿದವನು ಮತ್ತು ಮೇಲೆ ಆಕಾಶದ ಗುಂಬಜವನ್ನು ಮಾಡಿದವನು. ಅವನು ನಿಮಗೆ ರೂಪ ಕೊಟ್ಟನು. ಬಹಳ ಸುಂದರ ರೂಪವನ್ನೇ ಕೊಟ್ಟನು. ಅವನು ನಿಮಗೆ ಶುದ್ಧ ವಸ್ತುಗಳಿಂದ ಆಹಾರ ನೀಡಿದನು. ಈ (ಕಾರ್ಯಗಳನ್ನು ಮಾಡಿರುವಂತಹ) ಅಲ್ಲಾಹನೇ ನಿಮ್ಮ ಪ್ರಭು. ಅಗಣಿತ ಸಮೃದ್ಧಿಯುಳ್ಳವನು, ಅವನು ಸಕಲ ಲೋಕಗಳ ಪ್ರಭು.

هُوَ الْحَيُّ لَآ اِلٰهَ اِلَّا هُوَ فَادْعُوْهُ مُخْلِصِيْنَ لَهُ الدِّيْنَ ۭ اَلْحَمْدُ لِلّٰهِ رَبِّ الْعٰلَمِيْنَ ۝٦٥

65. ಅವನೇ ಚಿರಂತನನು. ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ನಿಮ್ಮ ಧರ್ಮವನ್ನು ಅವನಿಗಾಗಿಯೇ ಮೀಸಲಾಗಿಟ್ಟು ಅವನನ್ನೇ ಪ್ರಾರ್ಥಿಸಿರಿ. ಸಕಲ ಪ್ರಶಂಸೆಗಳೂ ಸಕಲ ಲೋಕಗಳ ಪಾಲಕ ಪ್ರಭುವಾದ ಅಲ್ಲಾಹನಿಗೆ ಮೀಸಲು.

10. ಈ ಸೂಕ್ತದಲ್ಲಿ ಎರಡು ವಿಷಯಗಳು ಅತ್ಯಂತ ಗಮನಾರ್ಹವಾಗಿವೆ. ಮೊದಲನೆಯದಾಗಿ 'ದುಆ' ಮತ್ತು 'ಇಬಾದತ್'ನ್ನು ಇಲ್ಲಿ ಸಮಾನ ಅರ್ಥ ಬರುವ ಪದಗಳ ರೂಪದಲ್ಲಿ ಪ್ರಯೋಗಿಸಲಾಗಿದೆ. ಮೊದಲನೇ ವಾಕ್ಯದಲ್ಲಿ ಯಾವುದಕ್ಕೆ 'ದುಆ' ಎಂಬ ಪದ ಬಳಸಲಾಗಿದೆಯೋ ಎರಡನೆಯ ವಾಕ್ಯದಲ್ಲಿ ಅದಕ್ಕೆ 'ಇಬಾದತ್' ಎಂಬ ಪದ ಬಳಸಲಾಗಿದೆ. ಇದರಿಂದ ದುಆ ಅಥವಾ ಪ್ರಾರ್ಥನೆಯಲ್ಲಿ ಇಬಾದತ್ ಅಥವಾ ಇಬಾದತ್‌ನ ಸ್ಫೂರ್ತಿ ಅಡಕವಾಗಿದೆ ಎಂದು ಸ್ಪಷ್ಟವಾಗುತ್ತದೆ. ಎರಡನೆಯದಾಗಿ ಅಲ್ಲಾಹನಲ್ಲಿ ಪ್ರಾರ್ಥಿಸದವರಿಗೆ 'ಅಹಂಕಾರ ಪಟ್ಟು ನನ್ನ ದಾಸ್ಯ ಮತ್ತು ಆರಾಧನೆಯಿಂದ ವಿಮುಖರಾಗುವವರು' ಎಂಬ ಪದಗಳನ್ನು ಪ್ರಯೋಗಿಸಲಾಗಿದೆ. ಅಲ್ಲಾಹನಲ್ಲಿ ಪ್ರಾರ್ಥಿಸುವುದು ದಾಸ್ಯದ ಬೇಡಿಕೆಯಾಗಿದೆ. ಅದರಿಂದ ವಿಮುಖನಾಗುವವನು ದುರಹಂಕಾರದಲ್ಲಿದ್ದಾನೆಂದರ್ಥ ಎಂದು ಇದರಿಂದ ತಿಳಿದು ಬರುತ್ತದೆ.

66. ಸಂದೇಶವಾಹಕರೇ, ಇವರೊಡನೆ ಹೇಳಿರಿ- "ನೀವು ಅಲ್ಲಾಹನನ್ನು ಬಿಟ್ಟು ಯಾರನ್ನೆಲ್ಲಾ ಪ್ರಾರ್ಥಿಸುತ್ತಿರುವಿರೋ ಅವರ ದಾಸ್ಯ-ಆರಾಧನೆ ಮಾಡುವುದರಿಂದ ನನ್ನನ್ನು ತಡೆಯಲಾಗಿದೆ. ನನ್ನ ಬಳಿಗೆ ನನ್ನ ಪ್ರಭುವಿನ ಕಡೆಯಿಂದ ಸುಸ್ಪಷ್ಟ ನಿದರ್ಶನಗಳು ಬಂದಿರುವಾಗ (ನಾನು ಈ ಕಾರ್ಯವೆಸಗುವುದಾದರೂ ಹೇಗೆ?) ನಾನು ಸಕಲ ಲೋಕಪಾಲಕನ ಮುಂದೆ ಶರಣಾಗತನಾಗಬೇಕೆಂದು ನನಗೆ ಅಪ್ಪಣೆ ಕೊಡಲಾಗಿದೆ."

قُلْ إِنِّي نُهِيتُ أَنْ أَعْبُدَ الَّذِينَ
تَدْعُونَ مِن دُونِ اللَّهِ لَمَّا جَاءَنِيَ
الْبَيِّنَاتُ مِن رَّبِّي وَأُمِرْتُ أَنْ
أُسْلِمَ لِرَبِّ الْعَالَمِينَ ٦٦

67. ನಿಮ್ಮನ್ನು ಮಣ್ಣಿನಿಂದ ತರುವಾಯ ವೀರ್ಯದಿಂದ, ಅನಂತರ ರಕ್ತಪಿಂಡದಿಂದ ಸೃಷ್ಟಿಸಿದವನು ಅವನೇ ತಾನೇ. ಆಮೇಲೆ ಅವನು ನಿಮ್ಮನ್ನು ಶಿಶುವಿನ ರೂಪದಲ್ಲಿ ಹೊರ ತರುತ್ತಾನೆ. ಆ ಬಳಿಕ ನೀವು ನಿಮ್ಮ ಸಂಪೂರ್ಣ ಪ್ರೌಢಾವಸ್ಥೆಗೆ ತಲಪಲು ನಿಮ್ಮನ್ನು ಬೆಳೆಸುತ್ತಾನೆ. ಅನಂತರ ನೀವು ವೃದ್ಧಾಪ್ಯಕ್ಕೆ ತಲಪಲಿಕ್ಕಾಗಿ ಇನ್ನಷ್ಟು ಬೆಳೆಸುತ್ತಾನೆ ಮತ್ತು ನಿಮ್ಮಲ್ಲಿ ಕೆಲವರನ್ನು ಮೊದಲೇ ಹಿಂದಕ್ಕೆ ಕರೆಸಿಕೊಳ್ಳಲಾಗುತ್ತದೆ. ನೀವು ನಿಮ್ಮ ನಿಶ್ಚಿತ ಸಮಯವನ್ನು ತಲುಪಲಿಕ್ಕಾಗಿ ಹಾಗೂ ನೀವು ವಸ್ತುಸ್ಥಿತಿಯನ್ನು ಅರಿತುಕೊಳ್ಳಲಿಕ್ಕಾಗಿ ಹೀಗೆಲ್ಲಾ ಮಾಡಲಾಗುತ್ತದೆ.

هُوَ الَّذِي خَلَقَكُم مِّن تُرَابٍ ثُمَّ
مِن نُّطْفَةٍ ثُمَّ مِنْ عَلَقَةٍ ثُمَّ
يُخْرِجُكُمْ طِفْلًا ثُمَّ لِتَبْلُغُوا أَشُدَّكُمْ
ثُمَّ لِتَكُونُوا شُيُوخًا ۚ وَمِنكُم مَّن
يُتَوَفَّىٰ مِن قَبْلُ وَلِتَبْلُغُوا أَجَلًا
مُّسَمًّى وَلَعَلَّكُمْ تَعْقِلُونَ ٦٧

68. ಜೀವಂತಗೊಳಿಸುವವನೂ ಮರಣ ಕೊಡುವವನೂ ಅವನೇ. ಅವನು ಯಾವ ವಿಷಯದ ಬಗ್ಗೆ ತೀರ್ಮಾನ ಮಾಡುವಾಗಲೂ 'ಆಗಿ ಬಿಡು' ಎಂಬ ಅಪ್ಪಣೆಯೊಂದನ್ನು ಮಾತ್ರ ಕೊಟ್ಟು ಬಿಡುತ್ತಾನೆ ಮತ್ತು ಅದು ಆಗಿ ಬಿಡುತ್ತದೆ.

هُوَ الَّذِي يُحْيِي وَيُمِيتُ ۖ فَإِذَا قَضَىٰ
أَمْرًا فَإِنَّمَا يَقُولُ لَهُ كُن فَيَكُونُ ٦٨

69. ಅಲ್ಲಾಹನ ವಚನಗಳ ಬಗ್ಗೆ ಜಗಳ ಮಾಡುವವರನ್ನು ನೀವು ಕಂಡಿರಾ? ಅವರು ಎಲ್ಲಿಂದ ದಾರಿಗೆಡಿಸಲ್ಪಡುತ್ತಿದ್ದಾರೆ?

أَلَمْ تَرَ إِلَى الَّذِينَ يُجَادِلُونَ فِي آيَاتِ
اللَّهِ أَنَّىٰ يُصْرَفُونَ ٦٩

70. ಇವರು ಈ ಗ್ರಂಥವನ್ನೂ ನಾವು ನಮ್ಮ ಸಂದೇಶವಾಹಕರೊಂದಿಗೆ ಕಳುಹಿಸಿದ್ದ ಎಲ್ಲಾ ಗ್ರಂಥಗಳನ್ನೂ ಸುಳ್ಳಾಗಿಸುತ್ತಾರೆ. ಸದ್ಯವೇ ಇವರಿಗೆ ಗೊತ್ತಾಗಲಿದೆ-

الَّذِينَ كَذَّبُوا بِالْكِتَابِ وَبِمَا أَرْسَلْنَا
بِهِ رُسُلَنَا ۖ فَسَوْفَ يَعْلَمُونَ ٧٠

71-72. ಆಗ ಕಂಠ ಕಡಗಗಳು ಮತ್ತು ಸಂಕೋಲೆಗಳು ಅವರ ಕೊರಳುಗಳಲ್ಲಿರುವುವು. ಅವುಗಳನ್ನು ಹಿಡಿದು ಅವರು ಕುದಿಯುತ್ತಿರುವ ನೀರಿನ ಕಡೆಗೆ ಎಳೆಯಲ್ಪಡುವರು. ತರುವಾಯ ನರಕಾಗ್ನಿಗೆ ಎಸೆಯಲ್ಪಡುವರು.

إِذِ الْأَغْلَالُ فِي أَعْنَاقِهِمْ وَالسَّلَاسِلُ
يُسْحَبُونَ ٧١
فِي الْحَمِيمِ ثُمَّ فِي النَّارِ يُسْجَرُونَ ٧٢

73-74. ಅನಂತರ ಅವರೊಡನೆ, "ನೀವು ಅಲ್ಲಾಹನನ್ನು ಬಿಟ್ಟು ಸಹಭಾಗಿಗಳನ್ನಾಗಿಸಿಕೊಂಡಿದ್ದ ಇತರ ದೇವರುಗಳು ಈಗ ಎಲ್ಲಿದ್ದಾರೆ?" ಎಂದು ಕೇಳಲಾಗುವುದು. ಆಗ ಅವರು, "ಅವು ನಮ್ಮಿಂದ ಕಳೆದು ಹೋದವು, ಮಾತ್ರವಲ್ಲ ನಾವು ಇದಕ್ಕೆ ಮುಂಚೆ ಯಾವುದನ್ನೂ ಕರೆದು ಪ್ರಾರ್ಥಿಸುತ್ತಿರಲಿಲ್ಲ" ಎಂದು ಉತ್ತರಿಸುವರು. ಹೀಗೆ ಸತ್ಯನಿಷೇಧಿಗಳು ಪಥಭ್ರಷ್ಟರಾಗಿರುವುದನ್ನು ಅಲ್ಲಾಹನು ಸಾಬೀತುಪಡಿಸಿ ಬಿಡುವನು.

ثُمَّ قِيلَ لَهُمْ أَيْنَ مَا كُنتُمْ تُشْرِكُونَ ﴿٧٣﴾ مِن دُونِ اللَّهِ ۖ قَالُوا ضَلُّوا عَنَّا بَل لَّمْ نَكُن نَّدْعُوا مِن قَبْلُ شَيْئًا ۚ كَذَٰلِكَ يُضِلُّ اللَّهُ الْكَافِرِينَ ﴿٧٤﴾

75. ಅವರೊಡನೆ ಹೀಗೆ ಹೇಳಲಾಗುವುದು, "ನೀವು ಭೂಲೋಕದಲ್ಲಿ ಅಸತ್ಯದಲ್ಲೇ ಮಗ್ನರಾಗಿದ್ದು ಅದರ ಮೇಲೆ ದರ್ಪ ತೋರುತ್ತಿದ್ದುದರಿಂದ ನಿಮ್ಮ ಗತಿ ಹೀಗಾಯಿತು.

ذَٰلِكُم بِمَا كُنتُمْ تَفْرَحُونَ فِي الْأَرْضِ بِغَيْرِ الْحَقِّ وَبِمَا كُنتُمْ تَمْرَحُونَ ﴿٧٥﴾

76. ಈಗ ನಡೆಯಿರಿ, ನರಕ ದ್ವಾರಗಳಲ್ಲಿ ಪ್ರವೇಶಿಸಿರಿ. ನಿಮಗೆ ಸದಾ ಅಲ್ಲೇ ಇರಬೇಕಾಗಿದೆ. ಅಹಂಕಾರಿಗಳ ಅತ್ಯಂತ ಕೆಟ್ಟ ವಾಸಸ್ಥಾನ."

ادْخُلُوا أَبْوَابَ جَهَنَّمَ خَالِدِينَ فِيهَا ۖ فَبِئْسَ مَثْوَى الْمُتَكَبِّرِينَ ﴿٧٦﴾

77. ಆದುದರಿಂದ ಸಂದೇಶವಾಹಕರೇ, ತಾಳ್ಮೆ ವಹಿಸಿರಿ. ಅಲ್ಲಾಹನ ವಾಗ್ದಾನವು ಪರಮ ಸತ್ಯವಾಗಿದೆ. ಇನ್ನು ನಾವು ಇವರಿಗೆ ಎಚ್ಚರಿಕೆ ನೀಡುತ್ತಿರುವಂತಹ ದುಷ್ಪರಿಣಾಮಗಳ ಒಂದಂಶವನ್ನು ನಿಮ್ಮೆದುರಲ್ಲೇ ಇವರಿಗೆ ತೋರಿಸಿದರೂ ಅಥವಾ (ಅದಕ್ಕೆ ಮುಂಚೆಯೇ) ನಿಮ್ಮನ್ನು ಇಹಲೋಕದಿಂದ ಎತ್ತಿಕೊಂಡರೂ ಇವರಿಗಂತೂ ನಮ್ಮ ಕಡೆಗೇ ಮರಳಿ ಬರಬೇಕಾಗಿದೆ.

فَاصْبِرْ إِنَّ وَعْدَ اللَّهِ حَقٌّ ۚ فَإِمَّا نُرِيَنَّكَ بَعْضَ الَّذِي نَعِدُهُمْ أَوْ نَتَوَفَّيَنَّكَ فَإِلَيْنَا يُرْجَعُونَ ﴿٧٧﴾

78. ಸಂದೇಶವಾಹಕರೇ, ನಾವು ನಿಮಗಿಂತ ಮುಂಚೆ ಅನೇಕ ಸಂದೇಶವಾಹಕರನ್ನು ರವಾನಿಸಿರುತ್ತೇವೆ. ಅವರಲ್ಲಿ ಕೆಲವರ ವೃತ್ತಾಂತಗಳನ್ನು ನಾವು ನಿಮಗೆ ತಿಳಿಸಿದ್ದೇವೆ ಮತ್ತು ಕೆಲವರ ವೃತ್ತಾಂತಗಳನ್ನು ತಿಳಿಸಿಲ್ಲ. ಅಲ್ಲಾಹನ ಅಪ್ಪಣೆ ಇಲ್ಲದೆ ತಾನಾಗಿಯೇ ನಿದರ್ಶನವನ್ನು ತರುವ ಸಾಮರ್ಥ್ಯ ಯಾವ ಸಂದೇಶವಾಹಕರಿಗೂ ಇರಲಿಲ್ಲ. ಅಲ್ಲಾಹನ ಆಜ್ಞೆ ಬಂದು ಬಿಟ್ಟಾಗ ಸತ್ಯಕ್ಕನುಸಾರ ತೀರ್ಮಾನ ಮಾಡಿ ಬಿಡಲಾಯಿತು ಮತ್ತು ಆಗ ದುಷ್ಕರ್ಮಿಗಳು ನಷ್ಟದಲ್ಲಿ ಬಿದ್ದುಬಿಟ್ಟರು.

وَلَقَدْ أَرْسَلْنَا رُسُلًا مِّن قَبْلِكَ مِنْهُم مَّن قَصَصْنَا عَلَيْكَ وَمِنْهُم مَّن لَّمْ نَقْصُصْ عَلَيْكَ ۗ وَمَا كَانَ لِرَسُولٍ أَن يَأْتِيَ بِآيَةٍ إِلَّا بِإِذْنِ اللَّهِ ۚ فَإِذَا جَاءَ أَمْرُ اللَّهِ قُضِيَ بِالْحَقِّ وَخَسِرَ هُنَالِكَ الْمُبْطِلُونَ ﴿٧٨﴾

79. ಅಲ್ಲಾಹನೇ ನಿಮಗಾಗಿ ಈ ಜಾನುವಾರುಗಳನ್ನು ಉಂಟು ಮಾಡಿರುತ್ತಾನೆ. ಅವುಗಳ ಪೈಕಿ ಕೆಲವನ್ನು, ನೀವು ಸವಾರಿಗಾಗಿಯೂ ಇನ್ನು ಕೆಲವನ್ನು ಆಹಾರಕ್ಕಾಗಿಯೂ ಉಪಯೋಗಿಸುವಂತೆ ಮಾಡಿರುತ್ತಾನೆ.

اللَّهُ الَّذِي جَعَلَ لَكُمُ الْأَنْعَامَ لِتَرْكَبُوا مِنْهَا وَمِنْهَا تَأْكُلُونَ ﴿٧٩﴾

80. ಅವುಗಳಲ್ಲಿ ನಿಮಗೆ ಇನ್ನೂ ಅನೇಕ ಪ್ರಯೋಜನಗಳಿವೆ. ನೀವು ಅವುಗಳ ಮೇಲೇರಿ, ನಿಮ್ಮ ಮನಗಳಲ್ಲಿ ಎಲ್ಲಿ ಹೋಗಬೇಕೆಂಬ ಇಚ್ಛೆ ಇದೆಯೋ ಅಲ್ಲಿಗೆ ತಲುಪಬಲ್ಲಿರಿ. ಅವುಗಳ ಮೇಲೂ ನಾವೆಗಳ ಮೇಲೂ ನೀವು ಸವಾರಿ ಮಾಡಿಸಲ್ಪಡುತ್ತೀರಿ.

وَلَكُمْ فِيهَا مَنَافِعُ وَلِتَبْلُغُوا عَلَيْهَا
حَاجَةً فِي صُدُورِكُمْ وَعَلَيْهَا وَ
عَلَى الْفُلْكِ تُحْمَلُونَ ٨٠

81. ಅಲ್ಲಾಹನು ತನ್ನ ಈ ನಿದರ್ಶನಗಳನ್ನು ನಿಮಗೆ ತೋರಿಸಿ ಕೊಡುತ್ತಿದ್ದಾನೆ. ನೀವು ಅವನ ಯಾವ ಯಾವ ನಿದರ್ಶನಗಳನ್ನು ನಿರಾಕರಿಸಬಲ್ಲಿರಿ?

وَيُرِيكُمْ آيَاتِهِ فَأَيَّ آيَاتِ اللَّهِ تُنْكِرُونَ ٨١

82. ಇವರಿಗಿಂತ ಮುಂಚೆ ಗತಿಸಿದವರ ಗತಿಯೇನಾಯಿತೆಂದು ನೋಡಲಿಕ್ಕಾಗಿ ಇವರು ಈ ಭೂಮಿಯಲ್ಲಿ ಸಂಚರಿಸಲಿಲ್ಲವೇ? ಅವರು ಸಂಖ್ಯೆಯಲ್ಲಿ ಇವರಿಗಿಂತ ಹೆಚ್ಚಿದ್ದರು, ಇವರಿಗಿಂತಲೂ ಹೆಚ್ಚು ಬಲಶಾಲಿಗಳಾಗಿದ್ದರು ಮತ್ತು ಭೂಮಿಯಲ್ಲಿ ಇವರಿಗಿಂತಲೂ ಅಧಿಕ ವೈಭವಯುಕ್ತ ಕುರುಹುಗಳನ್ನು ಬಿಟ್ಟು ಹೋಗಿರುವರು. ಅವರು ಸಂಪಾದಿಸಿದುದು ಅವರ ಯಾವ ಕೆಲಸಕ್ಕೂ ಬರಲಿಲ್ಲ.

أَفَلَمْ يَسِيرُوا فِي الْأَرْضِ فَيَنْظُرُوا
كَيْفَ كَانَ عَاقِبَةُ الَّذِينَ مِنْ
قَبْلِهِمْ ۚ كَانُوا أَكْثَرَ مِنْهُمْ وَأَشَدَّ
قُوَّةً وَآثَارًا فِي الْأَرْضِ فَمَا أَغْنَىٰ
عَنْهُمْ مَا كَانُوا يَكْسِبُونَ ٨٢

83. ಅವರ ಸಂದೇಶವಾಹಕರು ಅವರ ಬಳಿಗೆ ಪ್ರತ್ಯಕ್ಷ ಪ್ರಮಾಣಗಳನ್ನು ತಂದಾಗ ಅವರು ತಮ್ಮಲ್ಲಿದ್ದ ವಿದ್ಯೆಯಲ್ಲೇ ಮಗ್ನರಾಗಿದ್ದರು ಮತ್ತು ಅಪಹಾಸ್ಯ ಮಾಡುತ್ತಿದ್ದುದರ ಸುಳಿಯಲ್ಲೇ ಸಿಲುಕಿಕೊಂಡರು.

فَلَمَّا جَاءَتْهُمْ رُسُلُهُمْ بِالْبَيِّنَاتِ
فَرِحُوا بِمَا عِنْدَهُمْ مِنَ الْعِلْمِ وَ
حَاقَ بِهِمْ مَا كَانُوا بِهِ يَسْتَهْزِئُونَ ٨٣

84. ಅವರು ನಮ್ಮ ಯಾತನೆಯನ್ನು ಕಂಡುಕೊಂಡಾಗ ನಾವು ಏಕಮಾತ್ರನೂ ಸಹಭಾಗಿಗಳಾರೂ ಇಲ್ಲದವನೂ ಆದ ಅಲ್ಲಾಹನನ್ನು ನಂಬಿದೆವು. ನಾವು ಅವನ ಸಹಭಾಗಿಗಳೆಂದು ಪರಿಗಣಿಸುತ್ತಿದ್ದ ಸಕಲ ಆರಾಧ್ಯರನ್ನು ನಿರಾಕರಿಸುತ್ತೇವೆ ಎಂದು ಕೂಗಾಡಿದರು.

فَلَمَّا رَأَوْا بَأْسَنَا قَالُوا آمَنَّا بِاللَّهِ
وَحْدَهُ وَكَفَرْنَا بِمَا كُنَّا بِهِ مُشْرِكِينَ ٨٤

85. ಆದರೆ, ನಮ್ಮ ಯಾತನೆಯನ್ನು ಕಂಡ ಬಳಿಕ ಅವರ ವಿಶ್ವಾಸವು ಅವರಿಗೆ ಏನೂ ಫಲಕಾರಿಯಾಗುವಂತಿರಲಿಲ್ಲ. ಏಕೆಂದರೆ ಅಲ್ಲಾಹನ ದಾಸರ ಮಧ್ಯೆ ಸದಾ ಜಾರಿಯಲ್ಲಿದ್ದ ನಿಶ್ಚಿತ ನಿಯಮ ಇದೇ ಆಗಿತ್ತು ಮತ್ತು ಆಗ ಸತ್ಯನಿಷೇಧಿಗಳು ನಷ್ಟದಲ್ಲಿ ಬಿದ್ದು ಬಿಟ್ಟರು.

فَلَمْ يَكُ يَنْفَعُهُمْ إِيمَانُهُمْ لَمَّا رَأَوْا
بَأْسَنَا ۖ سُنَّتَ اللَّهِ الَّتِي قَدْ خَلَتْ
فِي عِبَادِهِ ۖ وَخَسِرَ هُنَالِكَ الْكَافِرُونَ ٨٥